# ಕೋವಿಡ್-19 ರ ಸಮಯದಲ್ಲಿ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲಿತ ಪಾಠಗಳು

Field Studies in Education | October 2021



**ಅಜೀಂ ಪ್ರೇಮ್‌ಜಿ ಶಾಲೆ, ಟೋಂಕ್ (ರಾಜಸ್ಥಾನ)**

ಸಂಪರ್ಕಿಸಿ: field.research@azimpremjifoundation.org

ಶಾಲೆಗಳು ಸಹಜ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗದಿರುವಂತಹ ಪರಿಸ್ಥಿತಿಗಳಲ್ಲಿ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ನೆರವಾದ ಬೋಧನಾ ವಿಧಾನಕ್ಕೆ ಸಂಬಂಧಿಸಿದ ವಿವಿಧ ಮಾರ್ಗಗಳು ಹಾಗೂ ಕಾರ್ಯತಂತ್ರಗಳನ್ನು ಅರ್ಥಮಾಡಿಕೊಳ್ಳಲು ಬಯಸುವ ಶಿಕ್ಷಕರು, ವೃತ್ತಿನಿರತರು ಹಾಗೂ ನೀತಿ ನಿರೂಪಕರಿಗಾಗಿ ಈ ವರದಿಯನ್ನು  ಸಿದ್ಧಗೊಳಿಸಲಾಗಿದೆ. ಕೋವಿಡ್-19  ಪಿಡುಗು ಶಿಕ್ಷಕರು ವಿದ್ಯಾರ್ಥಿಗಳನ್ನು ಶಾಲೆಯ ಹೊರಗಡೆ ಹಲವಾರು ರೀತಿಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿತು. ಇದು ಸವಾಲಿನಿಂದ ಕೂಡಿದ ಕೆಲಸವಾಗಿದ್ದರೂ ಸಹ, ಹೊಸದನ್ನು ಕಲಿಯಲು ಹಾಗೂ ಪರ್ಯಾಲೋಚಿಸಲು ಅವಕಾಶವನ್ನು ಒದಗಿಸಿತು. ಈ ಅನುಭವಗಳಿಂದ ಕಲಿತ ಪಾಠಗಳು ಹಾಗೂ ಪರ್ಯಾಲೋಚನೆಗಳನ್ನು, ಅದರಲ್ಲೂ ಈ ಸಂದರ್ಭವನ್ನು ಎದುರಿಸಿದ ರೀತಿಗಳಲ್ಲಿ ಯಾವುವು ವಿಶೇಷವಾಗಿ ಶಾಲೆಗಳು ಸಹಜವಾಗಿ ಕಾರ್ಯನಿರ್ವಹಿಸುತ್ತಿರುವಾಗಲೂ ಉಪಯುಕ್ತವಾಗಬಹುದು ಎಂದು ನಮಗೆ ಕಂಡುಬಂದಿದೆಯೋ ಅವುಗಳನ್ನು ಈ ವರದಿಯಲ್ಲಿ ಕ್ರೋಢೀಕರಿಸಲಾಗಿದೆ.

**ಕೋವಿಡ್-19 ರ ಸಮಯದಲ್ಲಿ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲಿತ ಪಾಠಗಳು**

# ಕೋವಿಡ್-19 ರ ಸಮಯದಲ್ಲಿ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲಿತ ಪಾಠಗಳು

## ಸಾರಾಂಶ


ಪಿಡುಗಿನ ಈ ಸಂದರ್ಭವು, ಬೋಧನೆ-ಕಲಿಕೆ ಪ್ರಕ್ರಿಯೆಯ ಹಲವಾರು ವಿವರಗಳನ್ನು ಕುರಿತು ನಾವು ಮತ್ತೆ ಆಲೋಚಿಸುವಂತೆ ಮಾಡಿದೆ. ನಮ್ಮ ಶಾಲೆಯು ಟೋಂಕ್ ಜಿಲ್ಲೆಯ ಒಂದು ಚಿಕ್ಕ ಗ್ರಾಮವಾದ ಬಾಮೋರ್ ನಲ್ಲಿದೆ. ಶಾಲೆಯಲ್ಲಿನ ಹೆಚ್ಚಿನ ವಿದ್ಯಾರ್ಥಿಗಳು ಕಡಿಮೆ ಸವಲತ್ತುಗಳನ್ನು ಹೊಂದಿರುವ ಸಾಮಾಜಿಕ ಹಿನ್ನೆಲೆಗಳಿಂದ ಬಂದವರು. ಈ ಶಾಲೆಯಲ್ಲಿ ಒಂದರಿಂದ ಎಂಟನೇ ತರಗತಿಗಳಲ್ಲಿ ಓದುತ್ತಿರುವ 247 ವಿದ್ಯಾರ್ಥಿಗಳಿದ್ದಾರೆ. ಈ ಎಲ್ಲ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಜೊತೆಗೆ ನಾವು ಮಾಡಿದ ಕೆಲಸದ ಆಧಾರದ ಮೇಲೆ ಈ ವರದಿಯನ್ನು ತಯಾರಿಸಲಾಗಿದೆ.

ಶಾಲೆಗಳನ್ನು ಮುಚ್ಚಿದ್ದ ಸಮಯದಲ್ಲಿ, ಆನ್-ಲೈನ್ ಕಲಿಕೆಗೆ ಅವಶ್ಯಕವಾದ ಡಿಜಿಟಲ್ ಸಾಧನಗಳನ್ನು ಶೇಕಡಾ 60 ರಷ್ಟು ವಿದ್ಯಾರ್ಥಿಗಳು ಹೊಂದಿರಲಿಲ್ಲ. ನಮ್ಮ ಅನುಭವದ ಪ್ರಕಾರ ಯಾರು ಅವುಗಳನ್ನು ಹೊಂದಿದ್ದರೋ ಅವರಿಗೂ ಸಹ, ಆನ್-ಲೈನ್ ಕಲಿಕೆ ಪರಿಣಾಮಕಾರಿಯಾಗಿರಲಿಲ್ಲ. ಆದ್ದರಿಂದ, ನಮ್ಮ ವಿದ್ಯಾರ್ಥಿಗಳನ್ನು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ನಾವು ಇತರ ಕಾರ್ಯತಂತ್ರಗಳನ್ನು ಹುಡುಕಲು ಪ್ರಾರಂಭಿಸಿದೆವು. ನಮ್ಮ ಅಂತಿಮ ಗುರಿ ಸರಳವಾಗಿತ್ತು. ನಮ್ಮ ವಿದ್ಯಾರ್ಥಿಗಳು ಈಗಾಗಲೇ ಏನನ್ನು ಕಲಿತಿದ್ದಾರೋ ಅದನ್ನು ಮರೆತು ಬಿಡಬಾರದು ಹಾಗೂ ಶಾಲೆಗಳನ್ನು ಮುಚ್ಚಲಾಗಿದ್ದರೂ ಸಹ ಅವರು ವ್ಯಾಸಂಗ ಮಾಡುತ್ತಿರುವ ಶೈಕ್ಷಣಿಕ ತರಗತಿಯ ಮೂಲ ಪಠ್ಯಕ್ರಮದ ನಿರೀಕ್ಷೆಗಳೇನಿವೆಯೋ ಅದಕ್ಕೆ ಅನುಗುಣವಾಗಿ ಮುಂದುವರೆಯಬೇಕು. ಆದ್ದರಿಂದ ಅ) ಎಲ್ಲ ಮೂಲ ಸಾಮರ್ಥ್ಯಗಳಲ್ಲೂ ತಮ್ಮ ತರಗತಿಯ ಮಟ್ಟಕ್ಕೆ ಅನುಗುಣವಾದಂತಹ ಯಥೋಚಿತ ದಕ್ಷತೆಯನ್ನು ನಮ್ಮ ಎಲ್ಲ ವಿದ್ಯಾರ್ಥಿಗಳೂ ಹೊಂದುವುದು ಹಾಗೂ ಎಲ್ಲ ತರಗತಿಗಳ ವಿದ್ಯಾರ್ಥಿಗಳೂ ಮೂಲ ಸಾಕ್ಷರತೆ ಮತ್ತು ಗಣಿತದ ಸಾಮರ್ಥ್ಯವನ್ನು  ಗಳಿಸುವುದನ್ನು ಖಚಿತಪಡಿಸುವುದು ಹಾಗೂ ಆ) ಗರಿಷ್ಠ ಕಲಿಕೆಗೆ ನೆರವಾಗಲು ಸಾಧ್ಯವಿರುವ ಎಲ್ಲ ವಿಧಾನಗಳನ್ನು, ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುವುದು- ಮುಂತಾದವುಗಳಿಗೆ ಅನುಗುಣವಾಗಿ ನಮ್ಮ ಪ್ರಯತ್ನಗಳನ್ನು ಸಂಯೋಜಿಸಿಕೊಂಡಿದ್ದೆವು.

ಮಾರ್ಚ್ 2020 ರಲ್ಲಿ ಲಾಕ್ ಡೌನ್ ಘೋಷಿಸಿದ ನಂತರ ಶಾಲೆಯಿಂದ  ಹೊರಗಿನ ತೊಡಗಿಸಿಕೊಳ್ಳುವಿಕೆ ಪ್ರಾರಂಭವಾಯಿತು. ಅಲ್ಲಿಂದಾಚೆಗಿನ ಇಡೀ ಪಯಣವನ್ನು ಮೂರು ಹಂತಗಳಾಗಿ ವಿಭಜಿಸಬಹುದು: 1ನೇ ಹಂತವು ಆನ್-ಲೈನ್ ಹಂತವಾಗಿತ್ತು (ವಿಡಿಯೋ ಕರೆಗಳು, ವಾಟ್ಸ್ ಆಪ್ ಮೂಲಕ ವಿದ್ಯಾರ್ಥಿಗಳು ಮಾಡಬೇಕಾದ ಕೆಲಸವನ್ನು ಹಂಚುವುದು ಹಾಗೂ ಫೋನ್ ಕರೆಗಳನ್ನು ಮಾಡುವುದು); 2ನೇ ಹಂತವು ಜೂನ್ 2020 ರಲ್ಲಿ ಆರಂಭವಾಯಿತು, ಅದು ಕಾರ್ಯಹಾಳೆಗಳನ್ನು (ವರ್ಕ್ ಶೀಟ್ಸ್) ಆಧರಿಸಿದ ಕೆಲಸ ನೀಡುವಿಕೆಯಾಗಿದ್ದು, ಮನೆಮನೆಗೆ ಭೇಟಿ ಕೊಡುವ ಮೂಲಕ ವ್ಯಕ್ತಿಗತ ಬೆಂಬಲವನ್ನೂ ನೀಡುವುದಾಗಿತ್ತು. 3ನೇ ಹಂತವು. ಜುಲೈ 2020 ರಲ್ಲಿ ಆರಂಭಗೊಂಡಿದ್ದು, ಸುರಕ್ಷಿತವಾದ ಚೆನ್ನಾಗಿ ಗಾಳಿ ಬೆಳಕಿರುವ ಸಾರ್ವಜನಿಕ ಸ್ಥಳಗಳಲ್ಲಿ ಇಡೀ ಸಮುದಾಯ ಅಥವಾ ಗ್ರಾಮಮಟ್ಟದ ಗುಂಪುಗಳೊಂದಿಗೆ ಮುಖತಃ ಸಂವಹನ ಮಾಡುವುದಕ್ಕೆ ಸಂಬಂಧಿಸಿದ್ದಾಗಿತ್ತು.

ಈ ಪ್ರತಿಯೊಂದು ಹಂತವೂ ತಮ್ಮದೇ ಆದ ಕಾರ್ಯಾಚರಣೆಗೆ ಸಂಬಂಧಿಸಿದ ಜಟಿಲತೆಗಳನ್ನು ತಂದೊಡ್ಡಿತು. ಉದಾಹರಣೆಗೆ, ಸಮುದಾಯ ಆಧಾರಿತ ತರಗತಿಗಳಿಗೆ ಸೂಕ್ತವಾದ ಸಾರ್ವಜನಿಕ ಸ್ಥಳಗಳನ್ನು ಕಂಡುಕೊಳ್ಳುವುದು, ಶಿಕ್ಷಕರ ಸರದಿಯ ಪಟ್ಟಿ ತಯಾರಿಸುವುದು ಇತ್ಯಾದಿ. ಈ ದಸ್ತಾವೇಜಿನಲ್ಲಿ ಇಂತಹ ಕೆಲವನ್ನು ಪ್ರಸ್ತಾಪಿಸಲಾಗಿದ್ದರೂ, ಅಂತಹ ವಿಷಯಗಳ ವಿವರಗಳ ಬಗ್ಗೆ ನಾವು ವಿಸ್ತರಿಸಿಲ್ಲ.

ಈ ಎಲ್ಲ ಹಂತಗಳನ್ನು ದಾಟಿ ಹೋಗುವಾಗ ನಾವು ಅವುಗಳಿಂದ ಕಲಿಯಲಾರಂಭಿಸಿದೆವು, ನಮ್ಮ ಕಾರ್ಯತಂತ್ರಗಳು ಸುಧಾರಿಸಿದವು ಹಾಗೂ  ಹೆಚ್ಚು ವಸ್ತುನಿಷ್ಠವೂ, ಪರಿಣಾಮಕಾರಿಯೂ ಆದವು. ಬೋಧನೆ-ಕಲಿಕೆಯ ಪ್ರಕ್ರಿಯೆಗಳು ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡಲು ನಾವು ಕಲಿತ ಈ ಪಾಠಗಳು, ಅಸ್ತವ್ಯಸ್ತಗೊಂಡಿರುವ ಪ್ರಸಕ್ತ ಶೈಕ್ಷಣಿಕ ಸನ್ನಿವೇಶದಲ್ಲಿ ಮಾತ್ರವಲ್ಲ, ಮುಂದೆ ಶಾಲೆಯ ಕಾರ್ಯಚಟುವಟಿಕೆಗಳು ಸಹಜ ಸ್ಥಿತಿಗೆ ಮರಳಿದ ನಂತರವೂ  ಉಪಯುಕ್ತವಾಗುತ್ತವೆ ಎಂದು ನಮಗನ್ನಿಸುತ್ತದೆ. ಆದ್ದರಿಂದ ಈ ದಾಖಲೆಯು, ನಮ್ಮ ಅನುಭವದಲ್ಲಿ ಕಂಡು ಬಂದ ಒಳನೋಟಗಳತ್ತ ಗಮನಹರಿಸುತ್ತದೆ ಹಾಗೂ ಅವುಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಬಹುದಾಗಿದೆ:

ಅ. **ನಾವು ವಿವಿಧ ತರಗತಿಗಳ ವಿದ್ಯಾರ್ಥಿಗಳ ಮಿಶ್ರ ಗುಂಪಿಗೆ (ಬಹು ಹಂತದ, ಬಹು-ವರ್ಗದ ತರಗತಿ) ಹೊಂದುವಂತಹ ಚಟುವಟಿಕೆಗಳನ್ನು ರೂಪಿಸಬೇಕಾದ ಸನ್ನಿವೇಶವನ್ನು ಎದುರಿಸಿದೆವು.** ಗುಂಪಿನಲ್ಲಿರುವ ವಿದ್ಯಾರ್ಥಿಗಳನ್ನು ವಿಂಗಡಿಸಿ, ಅವರನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಬದಲು, ನಾವು ಪ್ರತಿಯೊಂದು ತರಗತಿಯನ್ನು ಎಲ್ಲ ವಿದ್ಯಾರ್ಥಿಗಳನ್ನೂ ತೊಡಗಿಸಿಕೊಳ್ಳಲು ಸಾಧ್ಯವಾಗುವಂತಹ ಒಂದು ಸಾಮಾನ್ಯ ಚಟುವಟಿಕೆಯಿಂದ ಪ್ರಾರಂಭಿಸುತ್ತಿದ್ದೆವು. ಉದಾಹರಣೆಗೆ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ಅಥವಾ ಗ್ರಂಥಾಲಯದಿಂದ ಜತನದಿಂದ ಆರಿಸಿದ ಪುಸ್ತಕಗಳನ್ನು ಓದುವುದು ಮುಂತಾದ ಸಾಮಾಜಿಕ ಚಟುವಟಿಕೆಗಳು ಇಡೀ ಗುಂಪಿಗೆ ಒಂದು ಲಯವನ್ನು ಸೃಷ್ಟಿ ಮಾಡುತ್ತಾ, ಸಹಪಾಠಿಗಳಿಂದ ಕಲಿಯುವುದನ್ನು ಉತ್ತೇಜಿಸುತ್ತಿದ್ದವು. ಹಂಚಿಕೊಂಡು ಮಾಡುವ ಈ ಚಟುವಟಿಕೆಗಳ ನಂತರ, ತರಗತಿ ಹಾಗೂ ಕಲಿಕೆಯ ಹಂತದ ಆಧಾರದ ಮೇಲೆ ಪ್ರತ್ಯೇಕವಾದ ಚಟುವಟಿಕೆಗಳನ್ನು ಮಾಡಿಸುತ್ತಿದ್ದೆವು.

ಆ. ಎಲ್ಲ ತರಗತಿಗಳಿಗೆ ಸೇರಿದ ಶಿಕ್ಷಕರಾದ ನಾವೆಲ್ಲರೂ ಮೂಲ ಸಾಕ್ಷರತೆಯನ್ನು ಕಲಿಸಲು ಕೈ ಜೋಡಿಸಿದೆವು ಹಾಗೂ ತಮ್ಮ ತಮ್ಮ ನಿರ್ದಿಷ್ಟ ವಿಷಯಗಳ ನಿಯತವಾದ ಪಾಠ ಯೋಜನೆಯಲ್ಲಿ ಭಾಷೆ ಕಲಿಕೆಯ ಫಲಿತಗಳನ್ನು ಸಂಯೋಜಿಸಲು ಕಲಿತೆವು ಹಾಗೂ ಈ ಮೂಲಕ 'ಪಠ್ಯಕ್ರಮ ವ್ಯಾಪಿ ಭಾಷಾ ಕಲಿಕೆ'ಯ (Language across curriculum) ಮಾರ್ಗವನ್ನು ಸಾಕಾರಗೊಳಿಸಿಕೊಂಡವು. ಉದಾಹರಣೆಗೆ, ಪರಿಸರ ವಿಜ್ಞಾನದ 5ನೇ ತರಗತಿಯ ಶಿಕ್ಷಕರು ತಮ್ಮ ವಿಷಯದ ನಿಯತ ಪಾಠಗಳನ್ನು ಕಲಿಸುತ್ತಿರುವಾಗಲೇ, ತಮ್ಮ ವಿದ್ಯಾರ್ಥಿಗಳು ಪಾಠವನ್ನು ಅರ್ಥಮಾಡಿಕೊಂಡು, ತಮ್ಮದೇ ಭಾಷೆಯಲ್ಲಿ ಅದರ ಸಾರಾಂಶ ಮಂಡಿಸುತ್ತಾ, ಅದರ ಬಗ್ಗೆ ವ್ಯವಸ್ಥಿತವಾಗಿ ಅಭಿಪ್ರಾಯ ವ್ಯಕ್ತಪಡಿಸುವುದನ್ನು ಖಚಿತಪಡಿಸುತ್ತಿದ್ದರು. ಇವು ಭಾಷೆಯ ಕಲಿಕಾ ಫಲಿತಗಳು.

ಇ. ವಿದ್ಯಾರ್ಥಿಗಳು ಮೂಲ ಸಾಕ್ಷರತೆಯನ್ನು ಗಳಿಸಿಕೊಳ್ಳಲು ಅನುವಾಗುವಂತೆ ನಾವು ಪಠ್ಯಪುಸ್ತಕಗಳಾಚೆ ಹೋಗಿ, ಗ್ರಂಥಾಲಯಗಳಿಂದ ಪುಸ್ತಕಗಳನ್ನು ನಮ್ಮ ಬೋಧನೆಯ ಕೇಂದ್ರವಾಗಿಸಿಕೊಂಡೆವು. ಇದನ್ನು **ಉದ್ದೇಶಪೂರ್ವಕ ಓದು ಹಾಗೂ ಬರವಣಿಗೆಗಾಗಿ ಗ್ರಂಥಾಲಯದ ಪುಸ್ತಕಗಳನ್ನು ಆಧರಿಸಿದ ಒಂದು ಪೂರ್ಣ ಅಧಿವೇಶನ** ಎಂಬ ರೀತಿಯಲ್ಲಿ ರೂಪಿಸಲಾಗಿತ್ತು. ವಿದ್ಯಾರ್ಥಿಗಳು ಯಾವುದೇ ಪುಸ್ತಕವನ್ನು ಬೇಕಾದರೂ ಓದಲು ಆರಿಸಿಕೊಳ್ಳಬಹುದಿತ್ತು. ನಂತರ ಚಿತ್ರ ಬಿಡಿಸುವುದು, ಒಂದು ನಿರ್ದಿಷ್ಟ ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಆರಿಸುವುದು ಅಥವಾ ನಿರ್ದಿಷ್ಟ ಮಾತ್ರೆಯನ್ನು ಹೊಂದಿರುವ ಪದಗಳನ್ನು ಆರಿಸುವುದು, ತಮ್ಮದೇ ಮಾತುಗಳಲ್ಲಿ ಕಥೆಯನ್ನು ಮರುರೂಪಿಸಿ ಬರೆಯುವುದು ಅಥವಾ ತಮ್ಮದೇ ಮಾತುಗಳಲ್ಲಿ ಇಡೀ ತರಗತಿಗೆ ಕಥೆಯನ್ನು ಹೇಳುವುದು ಮುಂತಾದ ಚಟುವಟಿಕೆಗಳಲ್ಲಿ ಯಾವುದಾದರೊಂದನ್ನು ವೈಯಕ್ತಿಕವಾಗಿಯಾಗಲೀ ಅಥವಾ ಸಣ್ಣ ಗುಂಪುಗಳಲ್ಲಿಯಾಗಲೀ ಮಾಡಲು ಆಯ್ಕೆ ಮಾಡಿಕೊಳ್ಳಬೇಕಾಗಿತ್ತು.

ಈ. ಸಾಮುದಾಯಿಕ ಸ್ಥಳಗಳಲ್ಲಿ ತರಗತಿಗಳನ್ನು ನಡೆಸುವುದು ಕಾರ್ಯಾಚರಣೆಗೆ ಸಂಬಂಧಿಸಿದಂತಹ ತನ್ನದೇ ಆದ ಸವಾಲುಗಳನ್ನು ಒಡ್ಡಿದಾಗ ನಾವು ಆ ಪರಿಸ್ಥಿತಿಯನ್ನು ಬೋಧನೆಗೆ ಸಿಕ್ಕ ಒಂದು ಅವಕಾಶವೆಂದು ಭಾವಿಸಿ ಬಳಸಿಕೊಂಡೆವು. **ಅವರ ಸ್ಥಳೀಯ ಸಂದರ್ಭದಲ್ಲಿ ಪಾಠಗಳನ್ನು ನೆಲೆಗೊಳಿಸಿದ್ದು** ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿದ್ದು, ಪಾಠಗಳನ್ನು ಅವರಿಗೆ ಹೆಚ್ಚು ಹತ್ತಿರವಾಗಿಸಿತು. ಉದಾಹರಣೆಗೆ, ಚಾಟ್ ತಿನಿಸುಗಳ ಮಾರಾಟ ಮುಂತಾದ ತಮ್ಮ ಇಷ್ಟದ ಸ್ಥಳೀಯ ವ್ಯಾಪಾರಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಲಾಭ-ನಷ್ಟದ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡರು.

ಉ. **ಅನಿರ್ಬಂಧಿತ (Open-ended) ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಬರವಣಿಗೆಯ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳಲು** ನಾವು ಸಹಾಯ ಮಾಡಲು ಸಾಧ್ಯವಾಯಿತು. ಶಾಲೆಗಳು ಸಹಜ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾಗಲೂ ಸಹ ಬರವಣಿಗೆಯ ಕೌಶಲ್ಯವು ನಾವು ಎದುರಿಸುತ್ತಿದ್ದ ಸವಾಲುಗಳಲ್ಲಿ ಒಂದಾಗಿತ್ತು. ಈಗ ಗ್ರಂಥಾಲಯದ ತರಗತಿ ಹಾಗೂ ಸ್ಥಳೀಯ ಸನ್ನಿವೇಶಗಳನ್ನು ಒಳಗೊಂಡು ನಡೆಸುತ್ತಿದ್ದ ತರಗತಿಗಳ ಮುಂದುವರಿಕೆಯಾಗಿ ಅವುಗಳಿಗೆ ಸಂಬಂಧಿಸಿದಂತಹ ಚಟುವಟಿಕೆಗಳನ್ನು ಮಾಡಲು ಹೇಳಲಾಗುತ್ತಿತ್ತು. ವಿದ್ಯಾರ್ಥಿಗಳು ಅವರು ಓದಿದ ಯಾವುದೇ ಪುಸ್ತಕದ ಕುರಿತಾದರೂ ಅಥವಾ ತಮ್ಮ ಶಾಲಾ ಕಾರ್ಯಯೋಜನೆಗಾಗಿ (ಪ್ರಾಜೆಕ್ಟ್) ಕೆಲಸ ಮಾಡುವಾಗ, ತಾವು ಗಮನಿಸಿದ ಯಾವುದೇ ವಿಷಯದ ಕುರಿತಾದರೂ ಬರೆಯಬಹುದಾಗಿತ್ತು ಹಾಗೂ ದಿನಚರಿ ಪುಸ್ತಕವನ್ನು ತಯಾರು ಮಾಡಿಟ್ಟುಕೊಂಡಿದ್ದು ತಮ್ಮ ಸಹಪಾಠಿಗಳಿಗೆ ತೋರಿಸಿ ಹಿಮ್ಮಾಹಿತಿ ಪಡೆದುಕೊಳ್ಳಬಹುದಾಗಿತ್ತು.

ಊ. **ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಹಾಗೂ ಅವರ ಸಮುದಾಯದೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸಿಕೊಳ್ಳುವುದು, ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿ ತೊಡಗಿಕೊಳ್ಳುವುದನ್ನು ಹಾಗೂ ಕಲಿಕೆಯ ಮುಂದುವರಿಕೆಯನ್ನು ನೇರವಾಗಿ ಪ್ರಭಾವಿಸುತ್ತದೆ.** ಆದ್ದರಿಂದಾಗಿ ಅದು ಅವಶ್ಯಕ ಎನ್ನುವುದನ್ನು

ನಾವು ಅರ್ಥ ಮಾಡಿಕೊಂಡೆವು.  ಪಿಡುಗಿನ ಸಂದರ್ಭದಲ್ಲಿ, ತಮ್ಮ ಸ್ವಂತ ಮನೆ ಅಥವಾ ರಸ್ತೆಯೇ ಶಿಕ್ಷಣ ಕಲಿಯುವ ಸ್ಥಳವಾಗಬಹುದು ಎಂದು ಜನರು ಕಣ್ಣಾರೆ ನೋಡಿದಾಗ, ಶಾಲೆ ಹಾಗೂ ಶಿಕ್ಷಕರ ಕುರಿತಾದ ಅವರ ಧೋರಣೆಗಳು ಬದಲಾಗಿದ್ದನ್ನು ನಾವು ಗಮನಿಸಿದೆವು. ಈಗ ಶಿಕ್ಷಕರ ಬಗ್ಗೆ ಹೆಚ್ಚು ವಿಶ್ವಾಸ ಮೂಡಿತು. ಪರಸ್ಪರರ ಸಂಪರ್ಕದಲ್ಲಿ ಹೆಚ್ಚು ಸಂವೇದನಾಶೀಲತೆ ಬೆಳೆಯಿತು ಹಾಗೂ ನಮ್ಮ ಪ್ರಯತ್ನಗಳಿಗೆ ಹೆಚ್ಚಿನ ಸಹಕಾರ ಸಿಕ್ಕಿತು. ಇವೆಲ್ಲವೂ ವಿದ್ಯಾರ್ಥಿಗಳಿಗೆ ಕಲಿಕೆಯ ವಾತಾವರಣವನ್ನು ಉತ್ತಮಗೊಳಿಸಲು ಅನುವು ಮಾಡಿಕೊಟ್ಟವು.

ಋ. ಅದೇ ರೀತಿಯಲ್ಲಿ ನಮ್ಮ **ಹಳೆಯ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದು** ತನ್ನದೇ ಆದ ಅನುಕೂಲಗಳನ್ನು ಹೊಂದಿರುತ್ತದೆ ಎಂದು ನಾವು ಅರ್ಥಮಾಡಿಕೊಂಡೆವು. ಅವರು ತಮ್ಮ ಸಮುದಾಯದಲ್ಲಿ ನೆಲೆಸಿರುವ ನಮ್ಮ ಪ್ರತಿನಿಧಿಗಳು. ಆದ್ದರಿಂದ ಅವರು ಸಮುದಾಯವನ್ನು ಸಜ್ಜುಗೊಳಿಸಲು ಹಾಗೂ ವಿದ್ಯಾರ್ಥಿಗಳಿಗೆ ನೇರವಾಗಿ ಸಹಾಯ ಮಾಡಲು ನಮಗೆ ಒದಗಿ ಬಂದರು. ಜೊತೆಗೆ ಅವರ ಯಶಸ್ಸು ಕಿರಿಯ ವಿದ್ಯಾರ್ಥಿಗಳನ್ನು ಹುರಿದುಂಬಿಸಿತು.

ಈ ಎಲ್ಲ ಪರಿಶ್ರಮಗಳ ಫಲವಾಗಿ, ನಮ್ಮ ವಿದ್ಯಾರ್ಥಿಗಳ ಕಲಿಕೆಯ ನಷ್ಟವನ್ನು ಕನಿಷ್ಟಮಟ್ಟಕ್ಕೆ ಮಿತಿಗೊಳಿಸಲಾಯಿತು ಹಾಗೂ ತಮ್ಮ ವರ್ಗಗಳೊಳಗೆ ಅವರು ಮುನ್ನಡೆಯನ್ನು ಸಹ ಸಾಧಿಸಿದರು. ಇದನ್ನು ನಿಯತವಾಗಿ ನಿಗಾವಹಿಸಿ ಕೈಗೊಳ್ಳುತ್ತಿದ್ದ ಮೌಲ್ಯಮಾಪನವನ್ನು ಆಧರಿಸಿದ ದಾಖಲೆಗಳು ಸೂಚಿಸುತ್ತವೆ. ಗಮನಾರ್ಹವಾದ ವಿಷಯವೆಂದರೆ, 5 ಮತ್ತು 8 ನೇ ವರ್ಗದ ತರಗತಿಗಳ ಎಲ್ಲ ವಿದ್ಯಾರ್ಥಿಗಳ ಸಾಧನೆಯು ಮಾರ್ಚ್ 2020 ರ ಸಾಧನೆಯೊಂದಿಗೆ ಹೋಲಿಸಿ ನೋಡಿದಾಗ, ಆಗಸ್ಟ್ 2021 ರಲ್ಲಿ ಸ್ವಲ್ಪಮಟ್ಟಿಗೆ ಸುಧಾರಿಸಿತು ಹಾಗೂ ಕೆಲವು ವಿದ್ಯಾರ್ಥಿಗಳ ಸಾಧನೆಯು ಗಣನೀಯವಾಗಿತ್ತು. ಆದ್ದರಿಂದ, ನಮ್ಮ ಪ್ರಯತ್ನಗಳನ್ನು ಶಾಲೆಯ 'ಸಹಜ ಸ್ಥಿತಿಯ' ದಿನನಿತ್ಯದ ಕೆಲಸದಲ್ಲೂ ಮುಂದುವರೆಸುವುದು ಅರ್ಥಪೂರ್ಣವಾಗುತ್ತದೆ.

ಆದ್ದರಿಂದ, ಈ ವರದಿಯಲ್ಲಿ, ಶೈಕ್ಷಣಿಕ ಸನ್ನಿವೇಶವು ಸಹಜಸ್ಥಿತಿಗೆ ಮರಳಿದ ಬಳಿಕವೂ ಈ ಪ್ರಯತ್ನಗಳನ್ನು ನಮ್ಮ ನಿಯತಕಾರ್ಯಗಳಲ್ಲಿ ಸೇರ್ಪಡೆ ಮಾಡಿಕೊಳ್ಳಲು ಬೇಕಾದ ನಮ್ಮ ಯೋಜನೆಗಳ ಕುರಿತೂ ಸಹ ಚರ್ಚಿಸಿದ್ದೇವೆ. ನಮ್ಮ  ಒಳನೋಟಗಳು ಸ್ವಯಂಸಿದ್ಧವೆಂಬಂತೆಯೂ ಹಾಗೂ ಕೆಲವೊಮ್ಮೆ ಸಾಮಾನ್ಯ ತಿಳುವಳಿಕೆಯದ್ದೆನಿಸಬಹುದು. ಆದರೆ ಅದರ ಕಾರ್ಯಾಚರಣೆಯು ಜಟಿಲವಾದುದಾಗಿತ್ತು ಹಾಗೂ ಅದಕ್ಕೆ ಹೊಂದಿಕೊಳ್ಳುವುದು ಸುಲಭವೇನೂ ಆಗಿರಲಿಲ್ಲ. ಆದರೆ ಈ ಸಂಕಷ್ಟದ ಸಮಯದಲ್ಲಿ ಸಂದರ್ಭಗಳು ಶಿಕ್ಷಕರಾದ ನಮ್ಮನ್ನು ತರಗತಿಯಾಚೆಗೆ ಆಲೋಚಿಸುವಂತೆ ಒತ್ತಾಯಿಸಿದ್ದರಿಂದಾಗಿ ನಮಗೆ ಅವುಗಳ ಅವಶ್ಯಕತೆ ಹಾಗೂ ಪ್ರಾಮುಖ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

## 1. ಸಾಂದರ್ಭಿಕ ಹಿನ್ನೆಲೆ:

ಕೋವಿಡ್-19, ಇಡೀಯ ಜಗತ್ತನ್ನು ಒಂದು ಮಾನವೀಯ ಸಂಕಷ್ಟ ಮತ್ತು ಆರೋಗ್ಯದ ಬಿಕ್ಕಟ್ಟಿನ ಸುಳಿಗೆ ಸಿಲುಕಿಸಿತು ಮತ್ತು ಅದರ ಪರಿಣಾಮಗಳನ್ನು ಮಿತಗೊಳಿಸಲಿಕ್ಕಾಗಿ ತೀವ್ರ ಸ್ವರೂಪದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಗಳನ್ನು ಒತ್ತಾಯಿಸಿತು. ಶಾಲೆಗಳನ್ನು ಮುಚ್ಚುವುದು ಮತ್ತು ಪರ್ಯಾಯ ಕಲಿಕೆಯ ಮಾರ್ಗಗಳನ್ನು ಉತ್ತೇಜಿಸುವುದು ಅಂತಹ ಕ್ರಮಗಳಲ್ಲೊಂದು.

ನಮ್ಮ ಶಾಲೆಯಲ್ಲೂ ಸಹ ವಿದ್ಯಾರ್ಥಿಗಳಿಗೆ ಕಲಿಕೆಯ ಮುಂದುವರಿಕೆಯನ್ನು ಖಾತ್ರಿಪಡಿಸಲು ನಾವು ಅನೇಕ ಮಾರ್ಗೋಪಾಯಗಳನ್ನು ಬಳಸಿದೆವು. ಅದು ಸುಲಭವಾಗಿರಲಿಲ್ಲ. ನಮ್ಮ ಶಾಲೆಯು ಒಂದು ಹಳ್ಳಿಯಲ್ಲಿದ್ದು ಸುತ್ತಮುತ್ತಲಿನ ಸಮುದಾಯಗಳಿಗೆ ಸೇವೆ ಸಲ್ಲಿಸುತ್ತಿದೆ. ಕೋವಿಡ್-19 ರ ಸನ್ನಿವೇಶದಲ್ಲಿ ಸಾಮಾನ್ಯ ಎನ್ನಿಸಿಕೊಂಡಂಥ ಆಯ್ಕೆಗಳಾದ ಡಿಜಿಟಲ್ ಕಲಿಕೆಯ ಮಾರ್ಗವು ನಮ್ಮ ವಿದ್ಯಾರ್ಥಿಗಳಿಗೆ ಕಾರ್ಯಸಾಧುವಾಗಿರಲಿಲ್ಲ. ಈ ಸನ್ನಿವೇಶದಿಂದಾಗಿ ನಾವು ಪರಿಸ್ಥಿತಿಯನ್ನು ಬೇರೆ ರೀತಿಯಲ್ಲಿ ಗಮನಿಸಿ ವಿಭಿನ್ನ ಕಾರ್ಯಶೈಲಿಯನ್ನು ಅಳವಡಿಸಿಕೊಳ್ಳಲು ಮುಂದಾಗುವಂತೆ ಮಾಡಿತು. ನಮ್ಮ ಕೈಗೆಟಕುವಂತಿದ್ದ ಸಂಪನ್ಮೂಲಗಳು ಮತ್ತು ಮಾಧ್ಯಮಗಳನ್ನು ಉಪಯೋಗಿಸಿಕೊಂಡು ಯಾವುದಾದರೂ ರೀತಿಯಲ್ಲಿ ಶೈಕ್ಷಣಿಕ ಚಟುವಟಿಕೆಯ ಮುಂದುವರಿಕೆಯನ್ನು ಖಾತ್ರಿಪಡಿಸಲು ನಾವು ಯತ್ನಿಸಿದೆವು. ಪ್ರಾರಂಭದಲ್ಲಿ ನಾವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೂ ನಡುವೆ ಒಂದು ದೊಡ್ಡ ಗೋಡೆಯೇ ಎದ್ದು ಬಿಟ್ಟಿದೆಯೇನೋ ಎನಿಸುತ್ತಿತ್ತು ಮತ್ತು ನಾವು ಮೂರು ವಿಷಯಗಳಲ್ಲಿ ಅದನ್ನು ಮೀರಬೇಕಿತ್ತು. ಮೊದಲನೆಯದಾಗಿ ನಾವು ನಮ್ಮದೇ ಭಯಗಳನ್ನು ಗೆದ್ದು ವಿದ್ಯಾರ್ಥಿಗಳ ಬಳಿಗೆ ಹೋಗಬೇಕಿತ್ತು; ಎರಡನೆಯದಾಗಿ, ನಮಗೆ ಅನುಕೂಲಕರವಾಗಿದ್ದ ಶಾಲೆ ಮತ್ತು ತರಗತಿಯ ವಾತಾವರಣದ ಕುರಿತಾದ ತಿಳುವಳಿಕೆಯನ್ನು ದಾಟಿ ನಮ್ಮ ನೋಟವನ್ನು ಹರಿಸಬೇಕಿತ್ತು ಮತ್ತು ಮೂರನೆಯದಾಗಿ ನಮ್ಮ

ವಿದ್ಯಾರ್ಥಿಗಳು ತಮ್ಮ ತಮ್ಮ ಕಠಿಣವಾದ ಹಿನ್ನೆಲೆಗಳಿಂದಾಗಿ ಕಲಿಕೆಯಲ್ಲಿ ಹಿಂದುಳಿಯದೆ ಇರುವುದನ್ನು ಖಚಿತಪಡಿಸಬೇಕಿತ್ತು.

1. ಈಗ, ಒಂದೂವರೆ ವರ್ಷಗಳ ಅನುಭವದ ನಂತರ, ನಮ್ಮ ಅನುಭವಗಳನ್ನು ಪರಿಗಣಿಸುತ್ತಾ ಅದನ್ನು ಪುನರವಲೋಕಿಸುವುದು ಉಪಯುಕ್ತ. ನಾವು ನಮ್ಮ ಮಕ್ಕಳನ್ನು ಶೈಕ್ಷಣಿಕವಾಗಿ ತೊಡಗಿಸಿಕೊಂಡು, ಕಲಿಕಾ ನಷ್ಟವು ಅತ್ಯಂತ ಕಡಿಮೆಯಾಗುವಂತೆ ನೋಡಿಕೊಂಡಿದ್ದೇವೆ. ಜೊತೆಗೆ, ಬೋಧನೆ ಮತ್ತು ಕಲಿಕೆಯ ಕಾರ್ಯತಂತ್ರಗಳು ಹೆಚ್ಚು ಸುಸ್ಥಿರವಾಗಿರುವಂತೆ, ವಿಭಿನ್ನ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಗುಣವನ್ನು ಪಡೆಯುವಂತೆ ಮಾಡಲು ನಮ್ಮ ಕಲಿಕೆಗಳು ನೆರವಾಗಿವೆ.
2. *ಪಿಡುಗಿನ ಸಂದರ್ಭದಲ್ಲಿ ಬಳಸಿ ಪರಿಣಾಮಕಾರಿ ಎಂದು ಕಂಡುಬಂದಿರುವ ಬೋಧನಾ ಕಾರ್ಯತಂತ್ರಗಳು, ಶಾಲೆಗಳ ಸಹಜ ಸ್ಥಿತಿಯಲ್ಲಿ ಕೂಡಾ ಬೋಧನೆ-ಕಲಿಕೆಗಳನ್ನು ಶ್ರೀಮಂತಗೊಳಿಸಬಲ್ಲವು.*

## 2. ಅಜೀಂ ಪ್ರೇಮ್‌ಜಿ ಶಾಲೆಗಳ ಕುರಿತು

ಶಾಲಾ ಶಿಕ್ಷಣವನ್ನು ಕುರಿತಾದ ನಮ್ಮ ಸಮಗ್ರ ಕಾರ್ಯದಲ್ಲಿ ನಮ್ಮ ಶಾಲೆಗಳು ಒಂದು ಅವಿಭಾಜ್ಯ ಅಂಗವಾಗಿವೆ. ಸಾರ್ವಜನಿಕ (ಸರ್ಕಾರಿ) ಶಾಲೆಗಳಲ್ಲಿನ ಕಲಿಕೆಯ ಗುಣಮಟ್ಟವನ್ನು ಉತ್ತಮಪಡಿಸುವ ಮೂಲಕ ಒಂದು ಒಳ್ಳೆಯ ಸಮಾಜಕ್ಕೆ ಕೊಡುಗೆ ನೀಡಬೇಕು ಎಂಬುದು ನಮ್ಮ ಕಾರ್ಯೋದ್ದೇಶವಾಗಿದೆ. ಸಾರ್ವಜನಿಕ ಶಾಲೆಗಳನ್ನೇ ಹೋಲುವ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಒಂದು ಉತ್ತಮವಾದ ಮತ್ತು ನಮ್ಯತೆಯಿಂದ ಕೂಡಿದ ಶಿಕ್ಷಣವನ್ನು ನೀಡುವುದು ಸಾಧ್ಯ ಎಂಬುದನ್ನು ಸಿದ್ಧಿಸಿ ತೋರಿಸಬಹುದು ಎಂಬುದು ನಮ್ಮ ಶಾಲೆಗಳ ಪ್ರಾಥಮಿಕ ಉದ್ದೇಶ. ನಾವು ಇದನ್ನು ಮಾಡಲು ಹೊರಟಿರುವುದು, ಅವಕಾಶ ವಂಚಿತ ಹಿನ್ನೆಲೆಗಳಿಂದ ಬಂದ ಮಕ್ಕಳು ಕಲಿಯಲಾರರು ಎಂಬ ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ನಂಬಿಕೆಗೆ ಸವಾಲೊಡ್ಡಬೇಕು ಎಂದು ಮಾತ್ರವಲ್ಲ, ಜೊತೆಗೆ ಸಮತೆ ಮತ್ತು ಗುಣಮಟ್ಟವನ್ನು ಉತ್ತಮ ಪಡಿಸಿಕೊಳ್ಳುವಲ್ಲಿ ಸಾರ್ವಜನಿಕ ಶಾಲೆಗಳು ಯಾವ ನಿರ್ದಿಷ್ಟ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು ಎಂಬುದನ್ನು ಸೂಚಿಸಲು ಸಹ . ನಮ್ಮ ವಿದ್ಯಾರ್ಥಿಗಳು ಆಯಾ ತರಗತಿಯ ಮಟ್ಟಕ್ಕೆ ಅನುಗುಣವಾಗಿ ಸಾಮರ್ಥ್ಯಗಳನ್ನು ಬೆಳಸಿಕೊಳ್ಳಬೇಕು ಮತ್ತು ಜೊತೆಗೆ ವಯಸ್ಸಿಗನುಗುಣವಾದ ಕೌಶಲ್ಯ/ ಸಾಮರ್ಥ್ಯಗಳನ್ನು (ಉದಾ: ಸಂವಹನ, ಕರಕುಶಲತೆಯೊಂದರ ಕಲಿಕೆ, ತಂಡಗಳೊಂದಿಗೆ ಕೆಲಸ ಮಾಡುವ ಗುಣ) ಸಂಪಾದಿಸಿಕೊಳ್ಳಬೇಕು. ಮತ್ತು ಒಲವು/ಧೋರಣೆಗಳನ್ನು (ಉದಾ: ಇತರರ ಬಗ್ಗೆ ಸಂವೇದನಾಶೀಲತೆ, ವಿವಿಧ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಗುಣ) ಗಳಿಸಿಕೊಳ್ಳಬೇಕು ಎಂದು ನಾವು ಸತತವಾಗಿ ಪ್ರಯತ್ನಿಸುತ್ತಿರುತ್ತೇವೆ.

ಸದ್ಯದಲ್ಲಿ ನಾವು ಛತ್ತೀಸ್ಗಢ, ಕರ್ನಾಟಕ, ರಾಜಸ್ಥಾನ ಮತ್ತು ಉತ್ತರಾಖಂಡಕ್ಕೆ ಸೇರಿದ ಜಿಲ್ಲೆಗಳಲ್ಲಿ ಎಂಟು ಶಾಲೆಗಳನ್ನು ನಡೆಸುತ್ತಿದ್ದೇವೆ; ಅವು ಅಲ್ಲಿಗೆ ಹತ್ತಿರವಿರುವ ಹಳ್ಳಿ ಮತ್ತು ಪಟ್ಟಣಗಳ ಮಕ್ಕಳ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸುತ್ತಿವೆ.

**ಕೋಷ್ಟಕ-1 ಅಜೀಂ ಪ್ರೇಮ್‌ಜಿ ಶಾಲೆಗಳು- ಒಂದು ಕಿರು ಚಿತ್ರಣ**

| # | ರಾಜ್ಯ | ಜಿಲ್ಲೆ | ಸ್ಥಳ | ತರಗತಿಗಳು | ವಿದ್ಯಾರ್ಥಿಗಳ ದಾಖಲಾತಿ |
|---|---|---|---|---|---|
| 1 | ಛತ್ತೀಸ್‌ಗಢ | ಧಮ್‌ತರಿ | ಶಂಕರ್‌ದಾ | ಕೆ-10 | 326 |
| 2 | ಕರ್ನಾಟಕ | ಕಲಬುರಗಿ | ಸಾವಳಗಿ | ಕೆ-5 | 146 |
| 3 | ಕರ್ನಾಟಕ | ಯಾದಗಿರಿ | ಗುಲ್‌ಸರಮ್ | ಕೆ-9 | 266 |
| 4 | ರಾಜಸ್ಥಾನ | ಬಾರ್‌ಮೇರ್ | ಬಾರ್‌ಮೇರ್ | 1-4 | 139 |
| 5 | ರಾಜಸ್ಥಾನ | ಸಿರೊಹಿ | ಮಾಂಡ್ವಾ | 1-8 | 215 |
| 6 | ರಾಜಸ್ತಾನ | ಟೊಂಕ್ | ಬಾಮೊರ್ | 1-8 | 247 |
| 7 | ಉತ್ತರಾಖಂಡ್ | ಉಧಮ್‌ಸಿಂಗ ನಗರ್ | ದಿನೇಶ್‌ಪುರ್ | ಕೆ-10 | 416 |
| 8 | ಉತ್ತರಾಖಂಡ್ | ಉತ್ತರ್‌ಕಾಶಿ | ಮಾಟ್ಲಿ | ಕೆ-8 | 207 |

ಗಮನಿಸಿ: 1. ಮಾರ್ಚ್ 2021 ದಾಖಲಾತಿಯಾದ ವಿದ್ಯಾರ್ಥಿಗಳ ಸಂಖ್ಯೆ.

2. ಕೆ: ಪೂರ್ವ ಪ್ರಾಥಮಿಕ ವರ್ಗ (kindergarten)


ಕೋವಿಡ್ ಪಿಡುಗಿನ ಅವಧಿಯಲ್ಲಿ ನಮ್ಮ ಎಲ್ಲ ಶಾಲೆಗಳಲ್ಲಿನ ಶಿಕ್ಷಕರೂ ಸಹ ಅನೇಕ ಮಾರ್ಗಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಕಲಿಕೆಯಲ್ಲಿ ತೊಡಗಿಕೊಂಡಿದ್ದರು. ಎಲ್ಲಾ ಶಾಲೆಗಳಲ್ಲಿನ ಅನುಭವಗಳೂ ಒಂದೇ ತೆರನಾಗಿವೆ. ಆದಾಗ್ಯೂ ಈ ವರದಿ ರಾಜಾಸ್ಥಾನದ ಟೋಂಕ್‌ನಲ್ಲಿರುವ ನಮ್ಮ ಶಾಲೆಯ ಅನುಭವಗಳನ್ನು ನಿರ್ದಿಷ್ಟವಾಗಿ ಆಧರಿಸಿದೆ.

## 3. ಕೋವಿಡ್-19 ರ ಅವಧಿಯಲ್ಲಿ ಕಲಿಕಾರ್ಥಿಗಳೊಂದಿಗೆ ತೊಡಗಿಕೊಂಡ ಅನುಭವ

ಟೋಂಕ್ನ ಶಾಲೆಯು, ಜಿಲ್ಲಾ ಕೇಂದ್ರವಾದ ಟೋಂಕ್ ಪಟ್ಟಣಕ್ಕೆ 7 ಕಿ ಮಿ ದೂರದಲ್ಲಿರುವ ಬಾಮೋರ್ ಗ್ರಾಮದಲ್ಲಿದೆ. ಈ ಗ್ರಾಮದಲ್ಲಿ ಬಹುಸಂಖ್ಯಾತ ಜನರು ಪರಿಶಿಷ್ಟ ಜಾತಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದು, ನಮ್ಮ ಶಾಲೆಯ 60% ಭಾಗ ಮಕ್ಕಳು ಇಲ್ಲಿಂದಲೇ ಬರುತ್ತಾರೆ. ಉದ್ಯೋಗದ ಬಗ್ಗೆ ಹೇಳಬೇಕೆಂದರೆ ಇವರು ಕೃಷಿಯ ಮೇಲೆ ಅವಲಂಬಿತರಾಗಿದ್ದು ಕೂಲಿಗಾರರಾಗಿದ್ದಾರೆ. ಉಳಿದ 40% ಭಾಗ ವಿದ್ಯಾರ್ಥಿಗಳು ಟೋಂಕ್ ಪಟ್ಟಣದಿಂದ ಬರುತ್ತಾರೆ.

ಪಿಡುಗಿನ ಸಂದರ್ಭದಲ್ಲಿ ಶಾಲೆಯು ಮುಚ್ಚಿದ್ದ ಇಡೀ ಅವಧಿಯಲ್ಲಿ 1 ರಿಂದ 8 ನೇ ತರಗತಿಯವರೆಗಿನ ಎಲ್ಲ 247 ವಿದ್ಯಾರ್ಥಿಗಳೊಂದಿಗೆ ನಾವು ಸಂಪರ್ಕವನ್ನು ಉಳಿಸಿಕೊಂಡಿದ್ದೆವು.

ಚಿತ್ರ 1: ಮಕ್ಕಳೊಂದಿಗೆ ತೊಡಗಿಕೊಂಡದ್ದರ ಮಾರ್ಚ್ 2020 ರಿಂದ ಮಾರ್ಚ್ 2021 ರವರೆಗಿನ ಸಮಯದ ರೇಖೆ (ಟೈಮ್ಲೈನ್).




ನಮ್ಮ ತೊಡಗಿಕೊಳ್ಳುವಿಕೆಯ ಮೊದಲನೇ ಹಂತವು ಆನ್ ಲೈನ್ ಸ್ವರೂಪದ್ದಾಗಿತ್ತು. ಯಾವ ವಿದ್ಯಾರ್ಥಿಗಳ ಕುಟುಂಬಗಳಲ್ಲಿ ಸ್ಮಾರ್ಟ್ ಫೋನ್ಗಳಿದ್ದವೋ ಅವರಿಗೆ ವಿಡಿಯೊ ಕರೆಗಳನ್ನು ಮಾಡಿ, ವ್ಯಾಟ್ಸ್‌ಆಪ್ ಮೂಲಕ ಕೆಲಸಗಳನ್ನು ನೀಡಲಾಯಿತು. ಬೇರೆ ಮಕ್ಕಳ ವಿಷಯದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕ ಕರೆಗಳನ್ನು ಮಾಡಲಾಯಿತು. ಇದರಿಂದಾಗಿ ಹೊಸ ಸವಾಲುಗಳ ಸರಮಾಲೆಯೇ ಹುಟ್ಟಿಕೊಂಡಿತು. (ಎ) ಸ್ವತಃ ನಮಗೇ ಹೊಸ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುವುದು ಕಷ್ಟವಾಯಿತು. (ಬಿ) ಕೇವಲ 40% ವಿದ್ಯಾರ್ಥಿಗಳನ್ನು ಮಾತ್ರ ತಲುಪಲು ನಮಗೆ ಸಾಧ್ಯವಾಯಿತು. (ಸಿ) ಎರಡೂ ಕಡೆಯಿಂದ ನಡೆಯುವ ಪರಸ್ಪರ ಸಂವಹನ ತುಂಬಾ ಕಡಿಮೆಯಾಗಿದ್ದರಿಂದ, ನಾವು ಅತ್ಯಂತ ಕಡಿಮೆ ಪ್ರಮಾಣದಲ್ಲಿ ತಲುಪಲಾಗಿದ್ದ ವಿದ್ಯಾರ್ಥಿಗಳು ಸಹ ಏನನ್ನಾದರೂ ಕಲಿತರೋ ಇಲ್ಲವೋ ಎಂಬುದನ್ನು ನಿರ್ಧರಿಸುವುದು ಕಷ್ಟವಾಯಿತು. ಹೀಗಾಗಿ ನಾವು ಕಾರ್ಯಹಾಳೆಗಳನ್ನು ಸಿದ್ಧಪಡಿಸಿ, ಪ್ರತಿವಾರ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ ಅದನ್ನು ತಲುಪಿಸಬೇಕೆಂದು ಯೋಚಿಸಿದೆವು.

ಇದರೊಂದಿಗೆ ನಮ್ಮ ತೊಡಗಿಕೊಳ್ಳುವಿಕೆಯ ಎರಡನೇ ಹಂತವು ಆರಂಭವಾಯಿತು. ನಾವು ಅನೇಕ ವಿಷಯಗಳು ಮತ್ತು ಸ್ವಯಂ ಕಲಿಕೆ ಒಳಗೊಳ್ಳುವಂತೆ ವಿಷಯಾಧಾರಿತವಾದ ಕಾರ್ಯಹಾಳೆಗಳನ್ನು ತಯಾರಿಸಿದೆವು. ಸಾಮಾನ್ಯವಾಗಿ ನಾವು ಅಭ್ಯಾಸಕ್ಕೆ ಅಥವಾ ಮೌಲ್ಯಮಾಪನಕ್ಕೆ ಕಾರ್ಯಹಾಳೆಗಳನ್ನು ಪಠ್ಯಪುಸ್ತಕದ ಅಧ್ಯಾಯವೊಂದನ್ನು ಆಧರಿಸಿ ತಯಾರಿಸುತ್ತೇವೆ. ಆದರೆ ಈ ಕಾರ್ಯಹಾಳೆಗಳು, ಕನಿಷ್ಠ ಮಾರ್ಗದರ್ಶನದೊಂದಿಗೆ ವಿದ್ಯಾರ್ಥಿಗಳು ಗಳಿಸಿಕೊಳ್ಳಬೇಕಾದ ವಿಷಯಾಂಶಗಳನ್ನು ಒಳಗೊಳ್ಳುವಂತಹ ಚಟುವಟಿಕೆಗಳನ್ನು ಒದಗಿಸಿದ್ದವು. ವಿಭಿನ್ನ ಕಲಿಕಾ ಮಟ್ಟದಲ್ಲಿರುವ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಚಟುವಟಿಕೆಗಳನ್ನು ರೂಪಿಸಲಾಗಿತ್ತು. ಮನೆಗಳಿಗೆ ಭೇಟಿ ನೀಡಿದಾಗ ಕಾರ್ಯಹಾಳೆಗಳನ್ನು ಮಕ್ಕಳಿಗೆ ವಿತರಿಸಿ, ಪ್ರತಿವಾರ ನಾವು ನೀಡುತ್ತಿದ್ದ ಮರುಭೇಟಿಯ ಸಂದರ್ಭದಲ್ಲಿ ಇನ್ನಷ್ಟು ಬೆಂಬಲವನ್ನು ಒದಗಿಸಲಾಗುತ್ತಿತ್ತು. ಈ ರೀತಿಯಲ್ಲಿ ನಾವು ಸುಮಾರು 75%

ವಿದ್ಯಾರ್ಥಿಗಳನ್ನು ತಲುಪಿಸಿದೆವು. ಪ್ರತಿಯೊಂದು ಭೇಟಿಯಲ್ಲೂ ನಾವು ಹೊಸ ಕಾರ್ಯಹಾಳೆಗಳನ್ನು ವಿತರಿಸಿ ಹಿಂದಿನ ವಾರದ ಕಾರ್ಯಹಾಳೆಗಳನ್ನು ಸಂಗ್ರಹಿಸುತ್ತಿದ್ದೆವು. ಅಲ್ಲದೆ ಮೌಲ್ಯಮಾಪನ ಮುಗಿದಿದ್ದ ಅದಕ್ಕೂ ಹಿಂದಿನ ವಾರದ ಕಾರ್ಯಹಾಳೆಗಳನ್ನು ನಮ್ಮ ಹಿಮ್ಮಾಹಿತಿಯೊಂದಿಗೆ ಹಿಂದಿರುಗಿಸುತ್ತಿದ್ದೆವು. ಇದನ್ನು ಒಂದು ತಿಂಗಳ ಕಾಲ ನಡೆಸಿದ ನಂತರ ನಾವು ಇದೂ ಕೂಡ ತುಂಬಾ ಪರಿಣಾಮಕಾರಿಯಲ್ಲ ಎಂದು ಕಂಡುಕೊಂಡೆವು.  ಕಾರ್ಯಹಾಳೆಗಳ ವಿನ್ಯಾಸ, ವಿತರಣೆ ಹಾಗೂ ಮೌಲ್ಯಮಾಪನಕ್ಕಾಗಿ ನಾವು ವಹಿಸುತ್ತಿದ್ದ ಶ್ರಮಕ್ಕೆ ಹೋಲಿಸಿದರೆ ನಮಗೆ ಸಿಕ್ಕ ಪ್ರತಿಫಲ ತೀರಾ ಕಡಿಮೆ ಆಗಿತ್ತು.

ಒಂದು ಘಂಟೆಯ ಮಟ್ಟಿಗಾದರೂ ನಾವು ಮುಖತಃ ಭೇಟಿ ಮಾಡಿ ತೊಡಗಿಸಿಕೊಳ್ಳಲಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಮತ್ತು ಕಾರ್ಯಹಾಳೆಗಳು ಚೆನ್ನಾಗಿ ಉಪಯೋಗಿಸಲ್ಪಡುತ್ತವೆ ಎಂಬುದು ಸ್ಪಷ್ಟವಾಗಿತ್ತು. ಆದ್ದರಿಂದ 2020 ರ ಜುಲೈ ತಿಂಗಳಿನಿಂದ ನಾವು ಹಳ್ಳಿಯ ಮಟ್ಟದಲ್ಲಿ ಮುಖತಃ ಭೇಟಿ ನೀಡಿ ಗುಂಪುಗಳೊಂದಿಗೆ ತೊಡಗಿಸಿಕೊಳ್ಳಲು ಆರಂಭಿಸಿದೆವು. ಇದರೊಂದಿಗೆ ವೈಯುಕ್ತಿಕ ಭೇಟಿ ಮತ್ತು ಸಣ್ಣ ಗುಂಪುಗಳೊಂದಿಗೆ ನಡೆಸಿದ 3ನೇ ಹಂತದ ಅನುಸಂಧಾನ  ಆರಂಭವಾಯಿತು.

ನಾವು ನಮ್ಮ ವಿದ್ಯಾರ್ಥಿಗಳ ಮನೆಗಳು ಎಲ್ಲೆಲ್ಲಿವೆ  ಎಂಬುದನ್ನು ಗುರುತಿಸಿ ಅವರನ್ನು ಹತ್ತು ಸಣ್ಣ ತಂಡಗಳಾಗಿ ರಚಿಸಬಹುದು ಎಂದು ಗ್ರಹಿಸಿದೆವು. ಪ್ರತಿಯೊಂದು ತಂಡವನ್ನೂ ತೊಡಗಿಸಿಕೊಳ್ಳುವ ಪ್ರದೇಶದಲ್ಲಿಯೂ ಬಿಸಿಲು ಮಳೆಯಿಂದ ರಕ್ಷಣೆಯಿರುವ, ಚೆನ್ನಾಗಿ ಗಾಳಿ-ಬೆಳಕು ಸಿಗುವಂಥ ಸ್ಥಳವನ್ನು ಗುರುತಿಸಿದೆವು. ಅಲ್ಲಿ ಮಕ್ಕಳು ಸಾಕಷ್ಟು ಭೌತಿಕ ಅಂತರವನ್ನು ಕಾಪಾಡಿಕೊಂಡು ಕೂರಬಹುದಾಗಿತ್ತು. ಪ್ರತಿ ಗುಂಪಿಗೂ ದಿನವಹಿ 1.5- 3 ಘಂಟೆಗಳ ಕಾಲ ತರಗತಿ ನಡೆಸುವ ಜವಾಬ್ದಾರಿಯನ್ನು ಪ್ರತಿಯೊಬ್ಬ ಶಿಕ್ಷಕರಿಗೂ ನಿಗದಿಮಾಡಿ ಪಾಳಿಪಟ್ಟಿ ಯೊಂದನ್ನು ನಾವು ಸಿದ್ಧಪಡಿಸಿದೆವು. ಈ ಗುಂಪುಗಳಲ್ಲಿ ವಿಭಿನ್ನ ಸಾಮರ್ಥ್ಯಮಟ್ಟಗಳಿದ್ದ, ಬಹುವರ್ಗಗಳಿಗೆ ಸೇರಿದ ಮಕ್ಕಳಿರುತ್ತಿದ್ದರು; ಆದ್ದರಿಂದ ಮೊದಲೇ ಬಹಳ ಜತನದಿಂದ ಪಾಠಗಳನ್ನು ಯೋಜಿಸಿಕೊಳ್ಳಬೇಕಾಗುತ್ತಿತ್ತು. ಒಂದೇ ದಿನ ಇಬ್ಬರು ಶಿಕ್ಷಕರು ಎರಡು ಬೇರೆ ಬೇರೆ ಪ್ರದೇಶಗಳಲ್ಲಿ ಪಾಠ ಮಾಡುತ್ತಿದ್ದುದರಿಂದ ನಮಗೆ ಒಂದಿಷ್ಟು ಪ್ರಯಾಣ ಮಾಡಬೇಕಾಗಿ ಬರುತ್ತಿತ್ತು.



ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿದ್ದ ಸಣ್ಣ ತಂಡಗಳ ಒಂದು ಮಾದರಿ ದಿನದ ಕಾರ್ಯ ವೈಖರಿ ಹೀಗಿರುತ್ತಿತ್ತು.

- ಪ್ರತಿದಿನದ ಅನುಭವಗಳನ್ನು ಹಂಚಿಕೊಳ್ಳುವುದು, ದಿನಚರಿಯನ್ನು ಓದುವುದು, ಇತರ ಸ್ಥಳೀಯ ಪ್ರಚಲಿತ ವಿಷಯಗಳ ಅರಿವು, ದಿನದ ಕಾರ್ಯಯೋಜನೆಯನ್ನು ಹಂಚಿಕೊಳ್ಳುವುದು.
- ಸಾಮಾನ್ಯ ದೊಡ್ಡ ಗುಂಪಿನ ಚಟುವಟಿಕೆಗಳು- ಗ್ರಂಥಾಲಯದ ಪುಸ್ತಕಗಳನ್ನು ಉಪಯೋಗಿಸುವುದು ಅಥವಾ ಆಯ್ದ ವಿಷಯದ ಬಗ್ಗೆ ಚರ್ಚೆ,
- ಸಣ್ಣ ಗುಂಪು ಕೆಲಸಗಳು- ವಿದ್ಯಾರ್ಥಿಗಳ ಸಾಮರ್ಥ್ಯದ ಮಟ್ಟವನ್ನು ಅವಲಂಬಿಸಿ, ಅವುಗಳನ್ನು ಸಾಮಾನ್ಯ ಚಟುವಟಿಕೆಯ ನೆಲೆಯಲ್ಲಿ ಆಧರಿಸಬೇಕೋ ಅಥವಾ ಬೇರೆಯ ರೀತಿಯಲ್ಲಿಯೋ ಎಂಬುದನ್ನು ನಿರ್ಧರಿಸುವುದು.
- ಕೆಲ ಸಹ ಪಠ್ಯ ಚಟುವಟಿಕೆಗಳು -ಉದಾಹರಣೆಗೆ, ಚಿತ್ರಕಲೆ, ಕರಕುಶಲ- ಕ್ರಿಯೆಗಳೊಂದಿಗೆ ತರಗತಿಯನ್ನು ಮುಗಿಸುವುದು.

ನಂತರ, ಪೋಷಕರ ವಿಶ್ವಾಸವು ಬೆಳೆದು ಅವರು ತಮ್ಮ ಮೊಹಲ್ಲಾ/ಸಮುದಾಯದ ಆಚೆಗೂ ಮಕ್ಕಳನ್ನು ಕಳಿಸಲು ಸಿದ್ಧರಾದಾಗ ನಾವು ಚಿಕ್ಕತಂಡಗಳನ್ನು ವಿಲೀನಗೊಳಿಸಿ 5 ಗುಂಪುಗಳನ್ನು ರಚಿಸಿದೆವು ಮತ್ತು ಶಾಲೆಯ ಹೊರಗೆ ಮಾಮೂಲು ತರಗತಿಗಳನ್ನು ನಡೆಸುವ ಮಾದರಿಯಲ್ಲೇ ಹೆಚ್ಚಿನ ಅವಧಿಯ ವರ್ಗ ಆಧಾರಿತ ತರಗತಿಗಳನ್ನು ನಡೆಸಲಾರಂಭಿಸಿದೆವು.

ಉತ್ತಮ ಮಟ್ಟದ ವಿದ್ಯಾರ್ಥಿಗಳ ಕಲಿಕೆಯನ್ನು ಖಚಿತಪಡಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿದ್ದರಿಂದ ಸಮುದಾಯ ಆಧರಿತ ವ್ಯಕ್ತಿಗಳೊಂದಿಗಿನ ಮುಖಾಮುಖಿ ತೊಡಗಿಸಿಕೊಳ್ಳುವಿಕೆಯನ್ನು ಆಯ್ದುಕೊಳ್ಳಲಾಗಿತ್ತು. ಈ ಮಾರ್ಗವನ್ನು ಜಾರಿಗೊಳಿಸುವಾಗ ಬಂದ ಕೆಲವೊಂದು ಸವಾಲುಗಳ ಬಗ್ಗೆ ನಾವು ಗಮನಸೆಳೆಯಲು ಇಚ್ಛಿಸುತ್ತೇವೆ. ವಿದ್ಯಾರ್ಥಿಗಳು ಸುಲಭವಾಗಿ ಬಂದು ಹೋಗಲಾಗುವಂಥ, ಸಾಕಷ್ಟು ಗಾಳಿಬೆಳಕಿರುವ, ಕುಡಿಯುವ ನೀರು ಸಿಗುವ, ಶೌಚಾಲಯ ವ್ಯವಸ್ಥೆ ಇರುವ, ಹಾನಿಕಾರಕವಾಗುವ ರೀತಿಯಲ್ಲಿ ಏಕಾಗ್ರತೆಗೆ ಭಂಗತರದಂಥ ಪರಿಸರವಿರುವ, ಗ್ರಂಥಾಲಯದ ಪುಸ್ತಕಗಳನ್ನು ಮತ್ತು ಯಾವುದೇ ವಸ್ತುಗಳನ್ನು ಪ್ರದರ್ಶಿಸಲಾಗುವಷ್ಟು ಅವಕಾಶವಿರುವ, ಭೌತಿಕ



ಅಂತರವನ್ನು ಕಾಯ್ದುಕೊಳ್ಳುವಷ್ಟು ಸ್ಥಳಗಳನ್ನು ಹುಡುಕುವುದು ನಮಗೆ ಎದುರಾದ ಸಮಸ್ಯೆಗಳಲ್ಲೊಂದು. ನಾವು ಎದುರಿಸಬೇಕಾಗಿ ಬಂದ ಇನ್ನೂ ದೊಡ್ಡ ಸವಾಲೆಂದರೆ ವಿಭಿನ್ನ ತರಗತಿಗಳಿಗೆ ಸೇರಿದ ಸಮ್ಮಿಶ್ರ ಗುಂಪಿನ ವಿದ್ಯಾರ್ಥಿಗಳಿಗೆ ನಾವು ಹೊಂದಿಕೊಳ್ಳಬೇಕಾಯಿತಲ್ಲದೆ, ನಮ್ಮ ಪಾಠಗಳಲ್ಲಿ ಮೂಲ ಸಾಕ್ಷರತೆಯನ್ನು ಮತ್ತು ಸಂಖ್ಯಾ ಜ್ಞಾನವನ್ನು ಸೇರಿಸಿಕೊಳ್ಳಬೇಕಾಯಿತು. ಇದು ನಮಗೆ ಹೊಸದಾದ ಕಾರ್ಯವೈಖರಿಯಾಗಿದ್ದರಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಹೆಚ್ಚು ಕಮ್ಮಿ ನಾವು ಪ್ರತಿದಿನವೂ ಕಲಿಯಬೇಕಾಗುತ್ತಿತ್ತು. ಬೋಧನೆಗೆ ಹೇಳಿಮಾಡಿಸಿದಂತಿದ್ದ, ತರಗತಿ ಕೊಠಡಿಗಳಲ್ಲಿ ಪಠ್ಯಪುಸ್ತಕದ ಮೂಲಕವೇ ಕಲಿಸುವ ಆರಾಮದಾಯಕ ವಾತಾವರಣದಿಂದ ನಾವು ಹೊರ ಬರಬೇಕಾಗಿತ್ತು. ನಾವು ವೈದಾನಿಕ ಬೋಧನೆಗೆ ಬದಲಾಗಿ ಯೋಜನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬೇರೆ ಶಿಕ್ಷಕರೊಂದಿಗೆ ಜೊತೆಯಾಗಿ ಕೆಲಸಮಾಡಬೇಕಾಗಿತ್ತು. ನಮ್ಮ ಚೀಲಗಳ ತುಂಬಾ ಬೋಧನಾ ಸಾಮಗ್ರಿಗಳನ್ನು ತುಂಬಿಕೊಂಡು ವಿಭಿನ್ನ ಗುಂಪುಗಳಿರುವ ಜಾಗಕ್ಕೆ ಹೋಗಬೇಕಾಗುತ್ತಿತ್ತು ಮತ್ತು ದೈನಂದಿನ ಕಾರ್ಯದ ಪುನರವಲೋಕನಕ್ಕಾಗಿ ಮತ್ತು ಮರುದಿನದ ಯೋಜನೆಯನ್ನು ರೂಪಿಸಲು ಶಾಲೆಯತ್ತ ಮತ್ತೆ ಪ್ರಯಾಣಿಸಬೇಕಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ವಿಭಿನ್ನ ಕಾರಣಗಳಿಂದಾಗಿ ಸಮುದಾಯ ಗುಂಪುಗಳು ಸೇರುತ್ತಿದ್ದ ಜಾಗಗಳಿಗೂ ಬರಲಾಗದಿದ್ದ ವಿದ್ಯಾರ್ಥಿಗಳಿರುತ್ತಿದ್ದರು, ಆದ್ದರಿಂದ ಅವರ ಮನೆಗಳಿಗೆ ಭೇಟಿ ಕೊಡಬೇಕಾಗುತ್ತಿತ್ತು ಅಥವಾ ಅಂಥವರ ಗುಂಪುಗಳಿಗಾಗಿ ನಿಯತವಾಗಿ ದೂರವಾಣಿ ಆಧಾರಿತ ತರಗತಿಗಳನ್ನು ನಡೆಸಬೇಕಾಗುತ್ತಿತ್ತು. ಯಾವುದಾದರೂ ಹತ್ತಿರದ ಸಮುದಾಯವೊಂದರಲ್ಲಿ ಅಥವಾ ನಮ್ಮ ಬಂಧುಗಳ ಮಧ್ಯದಲ್ಲೇ ಕೋವಿಡ್-19 ಪ್ರಕರಣಗಳು ಕಂಡು ಬರುತ್ತಿದ್ದುದರಿಂದ ನಮ್ಮ ವ್ಯವಸ್ಥೆ ಏರುಪೇರಾಗುತ್ತಿತ್ತು ಮತ್ತು ನಮ್ಮ ನಿಯತವಾದ ದೈನಂದಿನ ಪ್ರಕ್ರಿಯೆಗೆ ಭಂಗ ಉಂಟಾಗುತ್ತಿತ್ತು. ನಾವು ನಿಯತವಾಗಿ ಕೋವಿಡ್-19 ಪರೀಕ್ಷೆಗೆ ಒಳಪಡುತ್ತಿದ್ದೆವು ಮತ್ತು ನಮ್ಮಲ್ಲಿ ಕೆಲವರಿಗೆ ಸೋಂಕು ತಗುಲಿದರೂ ಅದು ಮಕ್ಕಳಿಗೆ ಹರಡದಂತೆ ನೋಡಿಕೊಂಡೆವು.

ಇಡೀ ಪಿಡುಗಿನ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳಲು ಮಾಡಿದ ಪರಿಶ್ರಮದಾಯಕ ಕೆಲಸದಿಂದಾಗಿ ಮಕ್ಕಳಲ್ಲಿ ಕಲಿಕಾ ನಷ್ಟವು ತೀರಾ ಕಡಿಮೆಯಾಗುವಂತೆ ಖಾತ್ರಿಪಡಿಸಲು ನಮಗೆ ಸಾಧ್ಯವಾಯಿತು. ಪ್ರಾಥಮಿಕ ಹಂತದಲ್ಲಿ ಪ್ರಮುಖವಾಗಿ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನವನ್ನು, ಉತ್ತಮಪಡಿಸಲು ನಾವು ಗಮನವಿಟ್ಟು ಕೆಲಸ ಮಾಡಿದ್ದೆವು ಮತ್ತು ಈ ಕಾರ್ಯತಂತ್ರವು ಫಲಪ್ರದವಾಯಿತು. ವಾಸ್ತವದಲ್ಲಿ ಹೇಳಬೇಕೆಂದರೆ, 5 ಮತ್ತು 8 ನೇ ತರಗತಿಯ ವಿದ್ಯಾರ್ಥಿಗಳ ಆಗಸ್ಟ್ 2021 ರ ಕಲಿಕಾ ಮಟ್ಟವನ್ನು ಮಾರ್ಚ್ 2020ರ ಕಲಿಕಾ ಮಟ್ಟದ ಮಾಹಿತಿಯೊಂದಿಗೆ ಹೋಲಿಸಿದರೆ ಎಲ್ಲ ವಿದ್ಯಾರ್ಥಿಗಳ ಸಾಮರ್ಥ್ಯವು ಸ್ವಲ್ಪಮಟ್ಟಿಗೆ ಸುಧಾರಿಸಿದ್ದು ಕೆಲವರಲ್ಲಿ ಅದು ಗಣನೀಯವಾಗಿ ಏರಿಕೆಯಾಗಿದೆ.

## 4. ಬೋಧನಾ ವಿಧಾನದ ಒಳನೋಟಗಳು

ಈ ಹಿಂದಿನ ಭಾಗಗಳಲ್ಲಿ ಈಗಾಗಲೇ ಹೇಳಿದಂತೆ, ನಾವು ವಿಶಿಷ್ಟವಾದ ಸನ್ನಿವೇಶಗಳಲ್ಲಿರುವ ವಿದ್ಯಾರ್ಥಿಗಳೊಡನೆ ತೊಡಗಿಕೊಳ್ಳಬೇಕಾದ ಅವಶ್ಯಕತೆ ಇತ್ತು. ಬೋಧನೆಯ ಪ್ರಸ್ತುತ ಕಾರ್ಯತಂತ್ರಗಳ ಆಚೆಗೆ ನೋಡಬೇಕೆಂದು ಪ್ರತಿದಿನವೂ ಒತ್ತಾಯಿಸುವ ಹೊಸ ಸವಾಲುಗಳಿದ್ದವು. ಹೊಸ ಸಂದರ್ಭಗಳಲ್ಲಿರುವ ಕಲಿಕಾರ್ಥಿಗಳಿಗೆ ಮತ್ತಷ್ಟು ಆಸಕ್ತಿ ಹುಟ್ಟುವಂತೆ ಪ್ರತಿಯೊಂದು ಚಟುವಟಿಕೆ, ಪ್ರತಿಯೊಂದು ಪಾಠವನ್ನೂ ಯೋಜಿಸಲಾಗಿತ್ತು. ನಮಗೆ ಸೂಕ್ಷ್ಮ ವಿವರಗಳೇ ಮುಖ್ಯವಾಗಿದ್ದವು.

ನಮ್ಮ ಒಳನೋಟಗಳು ಅನೇಕ ರೀತಿಯವು. ಕೆಲವು, ಯೋಜನೆಯಂತಹ ತರಗತಿಯ ಮೂಲ ಪ್ರಕ್ರಿಯೆಗಳ ಬಗ್ಗೆ ಆಗಿದ್ದರೆ, ಉಳಿದವು ಸುತ್ತಲಿನ ಪರಿಸರದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಉಪಯೋಗಿಸುವ ಕುರಿತಾಗಿತ್ತು. ಒಟ್ಟಿನಲ್ಲಿ ಈ ಕಾರ್ಯತಂತ್ರಗಳ ಪರಿಣಾಮ ಗಮನಾರ್ಹವಾಗಿತ್ತು. ಉದಾಹರಣೆಗೆ, ನಾವು ಪ್ರಾಥಮಿಕ ಹಂತದಲ್ಲಿದ್ದ ವಿದ್ಯಾರ್ಥಿಗಳ ಭಾಷಾ ಕೌಶಲ್ಯದಲ್ಲಿ ಗಣನೀಯ ಸುಧಾರಣೆಯನ್ನು ಗಮನಿಸಿದೆವು-ಎಂದರೆ ಆಲಿಸುವ, ಕಲ್ಪಿಸಿಕೊಳ್ಳುವ, ಮಾತನಾಡುವ ಮತ್ತು ಭಾವಾಭಿವ್ಯಕ್ತಿಯ ಕೌಶಲ್ಯಗಳು. ಕೆಳಗಿನ ಭಾಗಗಳಲ್ಲಿ ನಾವು ನಮ್ಮಲ್ಲಿ ಯಶಸ್ವಿಯಾದ ಅಂತಹ ಬೋಧನಾ ಕಾರ್ಯತಂತ್ರಗಳನ್ನು ಅವುಗಳ ಸೂಕ್ಷ್ಮ ವಿವರಗಳೊಂದಿಗೆ ಹಂಚಿಕೊಳ್ಳುತ್ತಿದ್ದೇವೆ ಮತ್ತು ಸಾಮಾನ್ಯ ಸಂದರ್ಭಗಳಲ್ಲಿಯೂ ನಾವು ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂದು ಸೂಚಿಸುತ್ತಿದ್ದೇವೆ.

### ಎ. ವಿಭಿನ್ನ ಬಹುಹಂತದ, ಬಹು-ವರ್ಗದ ತರಗತಿಗೆ ಒಂದು ಶೈಕ್ಷಣಿಕ ಅವಧಿಯ ಯೋಜನೆ

ಸಾಮಾನ್ಯವಾಗಿ ಪ್ರತಿಯೊಂದು ತರಗತಿಯಲ್ಲೂ ವಿಭಿನ್ನ ಕಲಿಕಾ ಹಂತದಲ್ಲಿರುವ ವಿದ್ಯಾರ್ಥಿಗಳಿರುತ್ತಾರೆ ಮತ್ತು ಇದರಿಂದಾಗಿ ವಿವಿಧ ಹಂತಗಳ ವೈವಿಧ್ಯವನ್ನು ನಿಭಾಯಿಸಲು, ಅದಕ್ಕಾಗಿ ಯೋಜನೆಯನ್ನು ರೂಪಿಸಲು ಶಿಕ್ಷಕರು ಕಷ್ಟಪಡುತ್ತಾರೆ. ಒಂದೇ ತರಗತಿಯಲ್ಲಿ ಒಂದಕ್ಕಿಂತ ಹೆಚ್ಚು ವಿಭಿನ್ನ ವರ್ಗಗಳಲ್ಲಿರುವ ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿದಾಗ ವೈವಿಧ್ಯ ಹೆಚ್ಚಾಗುತ್ತದೆ ಮತ್ತು ಅದರೂಟ್ಟಿಗೆ ಬೋಧನೆಯ ಸವಾಲುಗಳೂ ಹೆಚ್ಚಾಗುತ್ತವೆ,

ಸಾಮಾನ್ಯವಾಗಿ ಶಿಕ್ಷಕರು ಒಂದು ಬಹುಹಂತದ, ಬಹುವರ್ಗಗಳ ಸಮೂಹವನ್ನು(ಎಂ ಜಿ ಎಂ ಎಲ್- ಮಲ್ಟಿಗ್ರೇಡ್ ಮಲ್ಟಿಲೆವೆಲ್) ಅವರವರ ವರ್ಗಗಳಿಗೆ ಅನುಗುಣವಾಗಿ ವಿಭಜಿಸಿ ಅವರಿಗೆ ಅದಕ್ಕನುಗುಣವಾಗಿ ನಿಯೋಜಿತ ಕಾರ್ಯಗಳನ್ನು ವಹಿಸುತ್ತಾರೆ. ನಾವು ಕೂಡ ಒಂದು ಬಹುಹಂತ, ಬಹುವರ್ಗದ ಸನ್ನಿವೇಶಕ್ಕೆ ಮುಖಾಮುಖಿಯಾದಾಗ ನಾವೊಂದು ಪರಿಹಾರವನ್ನು ರೂಪಿಸಿದೆವು; ಅದರ ಪ್ರಕಾರ (1) ಎಲ್ಲ ವಿದ್ಯಾರ್ಥಿಗಳೂ ಪರಸ್ಪರ ಸಂವಾದದಲ್ಲಿ, ಭಾಗವಹಿಸಲು ಸಾಧ್ಯವಾಗುವಂತಹ, ಎಲ್ಲರಿಗೂ ಹೊಸದಾದ ಮತ್ತು ಪ್ರಸ್ತುತವಾದ ಸಾಮಾನ್ಯ ವಿಷಯದೊಂದಿಗೆ ಆರಂಭಿಸಿದೆವು; ಮತ್ತು (2) ಇದರ ನಂತರ ಅವರ ಕಲಿಕಾ ಮಟ್ಟಕ್ಕೆ ಅನುಗುಣವಾಗಿ (ತರಗತಿಗಳಿಗೆ ಅನುಗುಣವಾಗಿ ಅಲ್ಲ) ನಿಯೋಜಿತ ಕಾರ್ಯಗಳನ್ನು ನೀಡಿದೆವು.

**ಒಂದು ಎಂ ಜಿ ಎಂ ಎಲ್ (MGML) ತರಗತಿ**

ಒಂದು ಆಸಕ್ತಿದಾಯಕ ಸಣ್ಣಕಥೆಯೊಂದಿಗೆ ತರಗತಿಯು ಆರಂಭವಾಗುತ್ತದೆ. ಶಿಕ್ಷಕರು ಅಥವಾ ವಿದ್ಯಾರ್ಥಿ ಕಥೆ ಹೇಳುವುದನ್ನು ಅಥವಾ ಜೋರಾಗಿ ಓದುವುದನ್ನು ಮುಗಿಸಿದ ನಂತರ ಕಥೆಯ ವಿಭಿನ್ನ ಅಂಶಗಳ ಬಗ್ಗೆ ಚರ್ಚೆ ನಡೆಯುತ್ತದೆ; ಉದಾ: ಕೆಲವೊಂದು ವಿವರಗಳನ್ನು ನೆನಪಿಸುವಂತಹ ಪ್ರಶ್ನೆಗಳು ಅಥವಾ ಮಕ್ಕಳಿಗೆ ಇಷ್ಟವಾದ ಅಥವಾ ಇಷ್ಟವಾಗದ ಪಾತ್ರಗಳು ಮತ್ತು ಪ್ರಕರಣಗಳು ಮತ್ತು ಕಥೆಯ ಕುರಿತಾದ ವೈಯಕ್ತಿಕ ಅಭಿಪ್ರಾಯ ಅಥವಾ ವಿಶ್ಲೇಷಣೆ. ನಂತರ ಬರೆಯುವುದಕ್ಕೆ ವಿದ್ಯಾರ್ಥಿಗಳ ವೈಯಕ್ತಿಕ ಅವಶ್ಯಕತೆಗೆ ಸರಿಹೊಂದುವ ಕಾರ್ಯವನ್ನೂ ನಿಯೋಜಿಸಲಾಗುತ್ತದೆ. ಅಕ್ಷರಾಭ್ಯಾಸ ಮಾಡುತ್ತಿರುವ ಅಥವಾ ಪದಗಳನ್ನು ಕಲಿಯುವ ಹಂತದಲ್ಲಿರುವ ವಿದ್ಯಾರ್ಥಿಗಳಿಗೆ ಒಂದು ನಿರ್ದಿಷ್ಟ ವರ್ಣ ಇರುವ ಪದವನ್ನು ಅಥವಾ ಮಾತ್ರೆ (ಅಕ್ಷರವನ್ನು) ಗುರುತಿಸಲಿಕ್ಕೆ ಹೇಳಲಾಗುತ್ತದೆ ಅಥವಾ ಒಂದೇ ಪದದಲ್ಲಿ ಉತ್ತರಿಸಲಾಗುವ ಪ್ರಶ್ನೆಯನ್ನು ಕೇಳಲಾಗುತ್ತದೆ. ಸರಳವಾದ ವಾಕ್ಯಗಳನ್ನು ಬರೆಯಲು ಕಲಿಯುತ್ತಿರುವವರಿಗೆ, ಚಿಕ್ಕದಾದ ಉತ್ತರವಿರುವ ಪ್ರಶ್ನೆಗಳನ್ನು ಅವರ ಪಠ್ಯಪುಸ್ತಕದಿಂದ ಅಥವಾ ಅವರದ್ದೇ ಜೀವನಾನುಭವದಿಂದ ಕೇಳಲಾಗುತ್ತದೆ. ಮೂರನೆಯ ಗುಂಪಿಗೆ ಕಥೆಯನ್ನು ವಿಶ್ಲೇಷಿಸಿ ಎಂದು ಅಥವಾ ಅದರ ಬಗ್ಗೆಯೇ ಅಭಿಪ್ರಾಯ ರೂಪಿಸಿ ಎಂದು ಮತ್ತು ಅದನ್ನು ತಮ್ಮದೇ ಆದ ಅನುಭವಗಳೊಂದಿಗೆ ತಾಳೆ ಹಾಕಿ, ತಮ್ಮದೇ ಪದಗಳಲ್ಲಿ ಅದನ್ನು ಸಾರಾಂಶೀಕರಿಸಿ ಎಂದು ಹೇಳಲಾಗುತ್ತದೆ.

ಇದನ್ನೇ ಹೋಲುವ ಆದರೆ ಇದಕ್ಕೆ ಪರ್ಯಾಯವಾದ ಇನ್ನೊಂದು ಪ್ರಯತ್ನವೆಂದರೆ ಎಲ್ಲಾ ಮಕ್ಕಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಆಸಕ್ತಿಯನ್ನು ಕೆರಳಿಸುವಂಥ, ಜಾಗ್ರತೆಯಿಂದ ಆಯ್ದುಕೊಳ್ಳಲಾದ ಗ್ರಂಥಾಲಯದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ಅದನ್ನು ಓದಲು ಒಂದು ಅವಧಿಯನ್ನು ಮೀಸಲಿಟ್ಟ ನಂತರ, ವಿಭಿನ್ನ ನಿಯೋಜಿತ ಕಾರ್ಯಗಳಲ್ಲಿ ಒಂದನ್ನು ಆಯ್ದುಕೊಳ್ಳಲು ವಿದ್ಯಾರ್ಥಿಗಳಿಗೇ ಬಿಡಲಾಯಿತು; ಉದಾ: ತಾವು ಓದಿದ್ದನ್ನು ಉಳಿದವರೊಂದಿಗೆ ಹಂಚಿಕೊಳ್ಳುವುದು, ತಮ್ಮ ಪ್ರತಿಕ್ರಿಯೆಗಳನ್ನು ಚಿತ್ರಿಸಿ ಅದನ್ನು ವ್ಯಕ್ತಪಡಿಸುವುದು.

ವಿದ್ಯಾರ್ಥಿಗಳು, ಬೇರೆ ವಿದ್ಯಾರ್ಥಿಗಳಿಂದ ಬೆಂಬಲವನ್ನು ತೆಗೆದುಕೊಳ್ಳುವುದರಿಂದ ಎಂ ಜಿ ಎಂ ಎಲ್ ತರಗತಿಯಲ್ಲಿ ಸಹವರ್ತಿ ಬೆಂಬಲವು ಒಂದು ಮುಖ್ಯ ಲಕ್ಷಣವಾಗುತ್ತದೆ ಮತ್ತು ಶಿಕ್ಷಕರೂ ವಿದ್ಯಾರ್ಥಿ ಮುಂದಾಳತ್ವದ ಬೆಂಬಲಕ್ಕೆ ತಮ್ಮದೇ ಕ್ರಿಯಾಶೀಲತೆಯಿಂದ ಅನುವು ಮಾಡಿಕೊಡಬಹುದು. ಈ ರೀತಿಯಲ್ಲಿ ಇಡೀ ತರಗತಿಗೆ ಒಂದೇ ಲಯವು ಪ್ರಾಪ್ತವಾಗುವುದಲ್ಲದೇ, ಕಲಿಕೆಯಲ್ಲಿ ಹಿಂದುಳಿದವರು ತರಗತಿಯ ಉಳಿದವರೊಂದಿಗೆ ಹೆಜ್ಜೆ ಹಾಕಲಾರಂಭಿಸುತ್ತಾರೆ. ಎಂ ಜಿ ಎಂ ಎಲ್ ತರಗತಿಗಳಲ್ಲಿ, ದೊಡ್ಡ ಗುಂಪಿನ ಕಾರ್ಯ ನಿರ್ವಹಣೆ, ಚಿಕ್ಕ ಗುಂಪಿನ ಕಾರ್ಯ ನಿರ್ವಹಣೆ, ವ್ಯಕ್ತಿಗತ ಕಾರ್ಯಭಾರ ಇಂತಹ ವೈವಿಧ್ಯವನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ.

ನೇರ ಮುಖಾಮುಖಿ ತೊಡಗಿಸಿಕೊಳ್ಳುವಿಕೆಯನ್ನು ಆರಂಭಿಸುವ ಮುನ್ನ ನಾವು ಸ್ವಯಂಕಲಿಕೆ ಸಾಮಗ್ರಿಯಾಗಿ ಕಾರ್ಯಹಾಳೆಯನ್ನು ಅಭಿವೃದ್ಧಿಪಡಿಸಿದ್ದೆವು. ಎಂ ಜಿ ಎಂ ಎಲ್ ಗುಂಪುಗಳಿಗೆ ಬೋಧಿಸುವಾಗ ಅಂತಹ ಕಾರ್ಯಹಾಳೆಗಳು ಒಂದು ಸಾಮಾನ್ಯ ಆಧಾರ ಸ್ತಂಭವಾಗಿ ನೆರವಾಗುತ್ತವೆ. ಓದುವುದರಲ್ಲಿಯೂ ಬರೆಯುವುದರಲ್ಲಿಯೂ ಮುಂದಿದ್ದ ವಿದ್ಯಾರ್ಥಿಗಳು ಬಹುತೇಕ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದರು. ಇನ್ನು ಕೆಲವರು ಗೆಳೆಯರ ನೆರವಿನೊಂದಿಗೆ ಕೆಲಸ ಮಾಡಿದರು.

ನಾವು ಸಹಜವಾದ ಶೈಕ್ಷಣಿಕ ವರ್ಷಗಳ ಸಂದರ್ಭದಲ್ಲೂ ಶೈಕ್ಷಣಿಕ ಅವಧಿಗಳನ್ನು ಯೋಜಿಸಲು ಇದೇ ಮಾದರಿಯನ್ನು ಅನುಸರಿಸುತ್ತೇವೆ. ತರಗತಿಯೊಂದಕ್ಕೆ ಅನ್ವಯಿಸುವಂತೆ ಎಲ್ಲರಿಗೂ ಒಂದು ಸಾಮಾನ್ಯ ಪಾಠ ಯೋಜನೆಯ ಜೊತೆಗೆ ನಿರ್ದಿಷ್ಟ ಗಮನ ಕೇಂದ್ರಿತವಾಗಿರುವ (ವಿದ್ಯಾರ್ಥಿಗಳ ಮಟ್ಟವನ್ನು ಅನುಸರಿಸಿ, ಪ್ರತಿ ವಿದ್ಯಾರ್ಥಿಗೆ ವಿಶಿಷ್ಟವಾದ ಯೋಜನೆಯನ್ನು ಹೊಂದಿದ) ಸಮ್ಮಿಶ್ರ ಮಾದರಿಯು ಚೆನ್ನಾಗಿ ಕೆಲಸ ಮಾಡುತ್ತದೆ.

### ಬಿ. ಮೂಲ ಸಾಕ್ಷರತೆಯ ಬಗ್ಗೆ ಎಲ್ಲ ಶಿಕ್ಷಕರೂ ಜವಾಬ್ದಾರಿ ತೆಗೆದುಕೊಳ್ಳುವುದು-'ಪಠ್ಯಕ್ರಮವ್ಯಾಪಿ ಭಾಷೆ'

ವಿವಿಧ ಕಾರಣಗಳಿಂದಾಗಿ ಅನೇಕ ವಿದ್ಯಾರ್ಥಿಗಳು ತಮ್ಮ ಆರಂಭದ ಪ್ರಾಥಮಿಕ ತರಗತಿಗಳಲ್ಲಿ ಮೂಲ ಸಾಕ್ಷರತಾ ಕೌಶಲ್ಯಗಳನ್ನು ಕಲಿತಿರುವುದಿಲ್ಲ ಎಂಬುದು ನಮಗೆ ಗೊತ್ತು. ಇದು  ಶಾಲೆಯಲ್ಲಿ ಅವರು ಮುನ್ನಡೆಯನ್ನು ಸಾಧಿಸುತ್ತಾ ಹೋದಂತೆ ವಿವಿಧ ವಿಷಯಗಳನ್ನು ಕಲಿಯಬಲ್ಲ ಅವರ ಸಾಮರ್ಥ್ಯದ ಮೇಲೆ, ಅವರ ಸಾಮರ್ಥ್ಯದ ಬಗ್ಗೆ ಅವರಿಗೆ ಇರಬೇಕಾದ ನಂಬಿಕೆಯ ಮೇಲೆ, ಆತ್ಮ ವಿಶ್ವಾಸದ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತದೆ. ಲಾಕ್ಡೌನ್ ಅವಧಿಯಲ್ಲಿ ಎಲ್ಲ ಶಿಕ್ಷಕರೂ ಅವರು ಯಾವುದೇ ವಿಷಯಕ್ಕೆ ಸೇರಿದವರಾಗಲೀ, ವಿದ್ಯಾರ್ಥಿಗಳ ಮೂಲ ಸಾಕ್ಷರತೆ ಮತ್ತು ಗಣಿತದ ಸಾಮರ್ಥ್ಯವನ್ನು ಉತ್ತಮಪಡಿಸುವ ಬಗ್ಗೆ ಮುಖ್ಯವಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ವಿದ್ಯಾರ್ಥಿಗಳು ಸಾಕ್ಷರತಾ ಕೌಶಲ್ಯಗಳನ್ನು ಗಳಿಸಿಕೊಳ್ಳುವಂತೆ ಮಾಡಲು ನಾವು ಅವರಿಗೆ ವಿಷಯಾಧಾರಿತ ಅಥವಾ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ಪರಿಚಯಿಸುವ ಮಾರ್ಗವನ್ನು ಅನುಸರಿಸಿದೆವು. ಈ ಪ್ರಕ್ರಿಯೆಯ ಮೂಲಕ ನಾವು ಭಾಷಾ ಕೌಶಲ್ಯಗಳ ಮೇಲೆ ಕೆಲಸ ಮಾಡುವುದು ಹೇಗೆ ಎಂಬುದನ್ನು ಕಲಿತದ್ದಲ್ಲದೆ, ಭಾಷೆಯು ಯಾವುದೇ ವಿಷಯವನ್ನು ಕಲಿಯಲು ಮೂಲಾಧಾರವಾಗಿದ್ದು, ಅದರ ಜವಾಬ್ದಾರಿ ಕೇವಲ ಭಾಷಾ ಶಿಕ್ಷಕರಿಗೆ ಸಂಬಂಧಿಸಿದ್ದಲ್ಲ ಎಂಬುದನ್ನು ಗ್ರಹಿಸಿದೆವು.

**ಎಲ್ಲ ವರ್ಗಗಳಲ್ಲಿನ ವಿಷಯಾಧಾರಿತ ತರಗತಿಗಳಲ್ಲೂ ಭಾಷಾ ಕಲಿಕೆ ನಡೆಯುತ್ತಿದೆ-ಕೆಲವು ಮೂರ್ತ ಉದಾಹರಣೆಗಳು.**

1. ಗಣಿತದ ತರಗತಿಗಳಲ್ಲಿ ಶಿಕ್ಷಕರು ಕೆಲವೊಂದು ವಿವರಣಾತ್ಮಕ ಲೆಕ್ಕಗಳನ್ನು ಬಿಡಿಸಲು ಕೊಡುತ್ತಾರೆ. ಆಗ ಅವರು ಏನು ಕೇಳಿದ್ದಾರೆ ಎಂಬುದನ್ನು ವಿದ್ಯಾರ್ಥಿಗಳು ಓದಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವಿವರಣಾತ್ಮಕ ಲೆಕ್ಕಗಳನ್ನು ರಚಿಸಲು ವಿದ್ಯಾರ್ಥಿಗಳಿಗೂ ಉತ್ತೇಜನ ನೀಡಲಾಗುತ್ತದೆ. ಹೀಗೆ ಅವರಿಗೆ ಬರವಣಿಗೆ ಅಭ್ಯಾಸವಾಗುತ್ತದೆ.
2. ವಿಭಿನ್ನ ವಿಷಯಗಳನ್ನು ಒಳಗೊಂಡ ಯೋಜನೆ(ಪ್ರಾಜೆಕ್ಟ್) ಆಧಾರಿತ ಕಾರ್ಯದಲ್ಲಿ (ಅಸೈನ್ಮೆಂಟ್ಸ್) ವಿದ್ಯಾರ್ಥಿಗಳು ಪ್ರಶ್ನೆಗಳನ್ನು ರೂಪಿಸಬೇಕು, ಹಳ್ಳಿಗಳಲ್ಲಿ ಗ್ರಾಮಸ್ಥರನ್ನು ಸಂದರ್ಶಿಸಬೇಕು, ವರದಿಗಳನ್ನು ತಯಾರಿಸಬೇಕು, ಸಂಪಾದಿಸಬೇಕು ಮತ್ತು ಅವುಗಳನ್ನು ಪ್ರಸ್ತುತಿ ಪಡಿಸಬೇಕು.
3. ಸಮಾಜ ವಿಜ್ಞಾನದ ತರಗತಿಗಳಲ್ಲಿ ಸಾಹಿತಿ ಪ್ರೇಮ್ ಚಂದ್ ರವರ ಆಯ್ದ ಕಥೆಗಳನ್ನು ಸಹ ಚರ್ಚೆಗೆ, ಯೋಜನೆ-ಕಾರ್ಯ ತೆಗೆದುಕೊಳ್ಳಲಾಯಿತು. ಉದಾ: ಠಾಕುರ್ ಕಾ ಕುಂವಾ, ನಶಾ, ಮಂತ್ರ, ಬಡೆ ಘರ್ ಕಿ ಬೇಟಿ ಮುಂತಾದವು.
4. ವಿಷಯಗಳ ಶಿಕ್ಷಕರು ಸಾಕಷ್ಟು ಓದುವ, ಬರೆಯುವ ಅವಕಾಶಗಳನ್ನು ನೀಡುವುದಲ್ಲದೆ ವಿಷಯಗಳ ಅಭಿವ್ಯಕ್ತಿ, ಪದಗಳ ಆಯ್ಕೆ, ವ್ಯಾಕರಣಾಂಶಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಬರವಣಿಗೆಯ ಗುಣಮಟ್ಟದ ಬಗ್ಗೆ ಕೂಡಾ ಗಮನ ನೀಡುತ್ತಾರೆ.
5. ದೈನಂದಿನ ಪ್ರಚಲಿತ ಘಟನೆಗಳು ಸಹ ಓದಲು, ಬರೆಯಲು ಮತ್ತು ಸಮಾಜೋ ರಾಜಕೀಯ ದೃಷ್ಟಿಕೋನವನ್ನು ಕಟ್ಟಿಕೊಳ್ಳಲು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಅವಕಾಶವನ್ನು ಒದಗಿಸುತ್ತವೆ. ಅನೇಕ ಬಾರಿ ವಿದ್ಯಾರ್ಥಿಗಳು ತಮ್ಮ ದಿನಚರಿಯನ್ನು ಬರೆಯಲು ಅದನ್ನು ಕೈಗೆತ್ತಿಕೊಳ್ಳುತ್ತಾರೆ.


ಎಲ್ಲ ವಿಷಯಗಳನ್ನು ಒಳಗೊಂಡಂತೆ ಮೂಲ ಸಾಕ್ಷರತೆಯನ್ನು ಗಳಿಸಿಕೊಳ್ಳುವಲ್ಲಿ ಇಂತಹ ಒಂದು ಏಕೀಕೃತ ಪ್ರಯತ್ನವನ್ನು ನಾವು ಮುಂದುವರೆಸಬೇಕಾಗುತ್ತದೆ ಎಂಬ ಮುನ್ನೋಟ ನಮಗಿದೆ. ಶಿಕ್ಷಕರು ತಮ್ಮ ತಮ್ಮ ವಿಷಯಗಳನ್ನು ಕಲಿಸುತ್ತಲೇ ಅದೇ ಸಮಯದಲ್ಲಿ ವಿದ್ಯಾರ್ಥಿಗಳ ಭಾಷಾ ಕೌಶಲ್ಯದ ಮೇಲೂ ಗಮನ ಕೊಡಬೇಕಾಗುತ್ತದೆ. ಇದಕ್ಕೇನೂ ಹೆಚ್ಚುವರಿ ಪ್ರಯತ್ನ ಬೇಕಿಲ್ಲ, ಪ್ರಜ್ಞಾಪೂರ್ವಕವಾಗಿ ಅವರು ತಮ್ಮ ಭಾಷಾ ಕೌಶಲ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಒಂದಿಷ್ಟು ನೆರವು ನೀಡಬೇಕಷ್ಟೇ. ಏಕೆಂದರೆ ಇತರ ಎಲ್ಲ ವಿಷಯಗಳನ್ನು ಕಲಿಯಲು, ತರಗತಿಗಳ ಹೊರಗೆ ಕಲಿಯಲು ಸಹ ಭಾಷಾ ಕೌಶಲ್ಯಗಳೇ ಮೂಲಾಧಾರವಾಗಿರುತ್ತವೆ.

### ಸಿ. 'ಪಠ್ಯಪುಸ್ತಕ ಕೇಂದ್ರಿತ ದೃಷ್ಟಿಕೋನದಿಂದ ಮೀರಿಹೋಗುವುದು. ಗ್ರಂಥಾಲಯದ ಸೃಜನಶೀಲ ಉಪಯೋಗದಿಂದ, ಆಲೋಚನೆ ಮತ್ತು ಭಾಷೆಯನ್ನು ಅಭಿವೃದ್ಧಿಪಡಿಸುವುದು

ಎಂ ಜಿ ಎಂ ಎಲ್ ಸನ್ನಿವೇಶವೊಂದರಲ್ಲಿ ಪಠ್ಯಪುಸ್ತಕ ಕೇಂದ್ರಿತ ಮಾರ್ಗವನ್ನು ಅನುಸರಿಸಿ ಮುಂದೆ ಸಾಗುವುದು ಕಷ್ಟವಿತ್ತು. ನಾವು ಮೂಲ ಸಾಕ್ಷರತೆ ಹಾಗೂ ಗಣಿತದ ಕೌಶಲ್ಯಗಳ ಬಗ್ಗೆ ಗಮನವನ್ನು ಕೇಂದ್ರೀಕರಿಸಲು ನಿರ್ಧರಿಸಿದ್ದರಿಂದ, ನಮ್ಮ ತರಗತಿಗಳು ಗ್ರಂಥಾಲಯ ಅವಧಿಗಳ ಮೇಲೆ ಅವಲಂಬಿತವಾಗುವುದಕ್ಕೆ ಪ್ರಯತ್ನಿಸಲಾಯಿತು. ಸಾಮಾನ್ಯವಾಗಿ ಶಾಲೆಗಳಲ್ಲಿ ಗ್ರಂಥಾಲಯಕ್ಕೆ ಬೇರೆ ಸಮಯವನ್ನು ಮೀಸಲಿರಿಸಲಾಗುತ್ತದೆ. ಅದು ತರಗತಿಗಳಿಂದ ಪ್ರತ್ಯೇಕವಾದ ಕಾಲಾವಧಿಯಾಗಿರುತ್ತದೆ. ಆದರೆ ಇಲ್ಲಿ ನಾವು ನಮ್ಮ ದೈನಂದಿನ ಶೈಕ್ಷಣಿಕ ಕಾರ್ಯಕಲಾಪದ ಕೇಂದ್ರಕ್ಕೇ ಗ್ರಂಥಾಲಯವನ್ನು ತಂದುಬಿಟ್ಟೆವು. ಪ್ರತಿಯೊಂದು ವಿದ್ಯಾರ್ಥಿ ಗುಂಪಿಗೂ ನೂರು ಪುಸ್ತಕಗಳನ್ನು ಗುರುತಿಸಿ ಒದಗಿಸಲಾಯಿತು. ವಿದ್ಯಾರ್ಥಿಗಳ ಕಲಿಕೆಯ ಮಟ್ಟದಲ್ಲಿ ಇರುವ ವೈವಿಧ್ಯ, ಅವರಿಗಿರುವ ವಿಭಿನ್ನ ಆಸಕ್ತಿಗಳು, ವಿಷಯಗಳ ವೈವಿಧ್ಯ ಇವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಪುಸ್ತಕಗಳನ್ನು ಆಯ್ಕೆಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ ಎಂತಹ ಕಾರ್ಯಭಾರವನ್ನು ವಹಿಸಬಹುದು ಎಂಬುದರ ಬಗ್ಗೆ ಒಂದು ಸಾಮೂಹಿಕವಾದ ತಿಳುವಳಿಕೆಯನ್ನು ಪಡೆಯಲು ಶಿಕ್ಷಕರ ದೈನಂದಿನ ಅವಲೋಕನ ಮತ್ತು ವಿಮರ್ಶೆಗಳು ನೆರವಾದವು.

ವಿದ್ಯಾರ್ಥಿಗಳು ಪ್ರತಿದಿನವೂ ಪುಸ್ತಕಗಳೊಂದಿಗೆ ತೊಡಗಿಕೊಳ್ಳುತ್ತಿದ್ದರು ಮತ್ತು ಬಹುತೇಕ ಪುಸ್ತಕಗಳನ್ನು ಓದಿದ ನಂತರ ತಮ್ಮ ಪುಸ್ತಕಗಳನ್ನು ಇನ್ನೊಂದು ಗುಂಪಿನ ಪುಸ್ತಕಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಅಲ್ಪ ಕಾಲಾವಧಿಯಲ್ಲೇ ಅವರು ತಾವು ಓದಿದ್ದರ ಬಗ್ಗೆ ಬಾಯಿಮಾತಿನಲ್ಲಿ ಹೇಳುವುದಕ್ಕೆ, ಅದರ ಬಗ್ಗೆ ಚಿತ್ರ ಬಿಡಿಸುವುದಕ್ಕೆ, ಕೆಲವು ವಾಕ್ಯಗಳನ್ನು ವಿವರಣೆಗಳನ್ನು ಬರೆಯುವುದಕ್ಕೆ ಮತ್ತು ಅದರ ಕುರಿತು ಕಿರುನಾಟಕ ಆಡುವುದಕ್ಕೆ, ತಾವು ಬರೆಯುವ ದಿನಚರಿ ಪುಸ್ತಕದಲ್ಲಿ ಅಭಿಪ್ರಾಯಗಳನ್ನು ಸೇರಿಸುವುದಕ್ಕೆ ಸಮರ್ಥರಾದರು. ಯಾರು ಯಾವ ಪುಸ್ತಕವನ್ನು ಓದಿದ್ದಾರೆ ಎಂಬುದರ ಬಗ್ಗೆ ದಾಖಲೆ ಇರಿಸಲಾಗಿತ್ತು-ಇದು ವಿದ್ಯಾರ್ಥಿಗಳಿಗೆ ಓದಲು ಪ್ರೇರಣೆ ನೀಡಿತು ಮತ್ತು ಕೆಲವರು ಪ್ರತಿದಿನ ಕನಿಷ್ಠ ಒಂದು ಪುಸ್ತಕವನ್ನಾದರೂ ಓದುತ್ತಿದ್ದರು.

ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವುದಕ್ಕೆ ಗ್ರಂಥಾಲಯದ ಪುಸ್ತಕಗಳನ್ನು ಹೇಗೆ ಉಪಯೋಗಿಸಬಹುದು ಎಂಬುದು ಶೀಘ್ರದಲ್ಲೇ ನಮಗೆಲ್ಲಾ ವೇದ್ಯವಾಯಿತು. ಪುಸ್ತಕಗಳು ಕೇವಲ ಓದುವುದನ್ನು ಕಲಿಯುವುದಕ್ಕಲ್ಲ, ಸರಾಗವಾಗಿ ಓದುವುದನ್ನು ಅಭ್ಯಾಸ ಮಾಡಿಸಲಿಕ್ಕೂ ಅಲ್ಲ ಅಥವಾ ಕೇವಲ ಆನಂದಕ್ಕಾಗಿಯೂ ಅಲ್ಲ. ಬದಲಿಗೆ ಅವು ಹೊಸ ಸನ್ನಿವೇಶಕ್ಕೆ, ಪರಿಕಲ್ಪನೆಗಳಿಗೆ ತೆರೆದುಕೊಳ್ಳುವ ಅವಕಾಶವಿದ್ದು ಅವು ಕಲ್ಪನಾಶಕ್ತಿಯನ್ನು ಹೆಚ್ಚಿಸುತ್ತವೆ ಹಾಗೂ ವಿದ್ಯಾರ್ಥಿಗಳಿಗೆ ಆಸಕ್ತಿ ಇರುವ ಅನೇಕ ಸಂಗತಿಗಳ ಬಗ್ಗೆ ಜ್ಞಾನವನ್ನು ಒದಗಿಸುತ್ತವೆ. ಬಹುತೇಕ ಶಾಲೆಗಳಲ್ಲಿ ನಾವು ಗ್ರಂಥಾಲಯವನ್ನು ಕ್ರಿಯಾಶೀಲವಾಗಿ, ಫಲದಾಯಕವಾಗಿ




ಅತ್ಯಂತ ಪುಟ್ಟಮಕ್ಕಳು ಸಹ ಪುಸ್ತಕಗಳನ್ನು ಓದುವುದರಲ್ಲಿ, ಚಿತ್ರಗಳನ್ನು ಗ್ರಹಿಸುವುದರಲ್ಲಿ ಭಾಗವಹಿಸುತ್ತಾರೆ ಮತ್ತು ಅವರಿಗೆ ಇಷ್ಟವಾದದ್ದರ ಬಗ್ಗೆ ಚಿತ್ರ ಬಿಡಿಸುತ್ತಾರೆ. ಶಿಕ್ಷಕರ ನೆರವಿನಿಂದ ಚಿತ್ರಗಳು ಪದಗಳಾಗುವುದು, ಪಾತ್ರಗಳಾಗುವುದು ಸಹ ಉಂಟು.

ಉಪಯೋಗಿಸುವುದನ್ನು ಕಾಣುವುದು ಕಷ್ಟ. ಆದರೆ ಗ್ರಂಥಾಲಯದ ಮಹತ್ವವನ್ನು ಅರಿಯಲು ಮತ್ತು ಅದನ್ನು ದೈನಂದಿನ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿ ಮಾಡುವುದು ಹೇಗೆ, ಏಕೆ ಎಂದು ಗ್ರಹಿಸಲು ನಮಗೆ ಈ ಅನುಭವ ಸಹಾಯಕವಾಯಿತು.

ನಾವು ಈ ಕಾರ್ಯತಂತ್ರವನ್ನು ನಮ್ಮ ನಿಯತವಾದ ಶೈಕ್ಷಣಿಕ ಕಾಲಾವಧಿಗಳ ಭಾಗವಾಗಿಸಿಕೊಳ್ಳಬೇಕೆಂದು ಯೋಜಿಸಿದ್ದೇವೆ. ವಿದ್ಯಾರ್ಥಿಗಳು ಓದಿದ ನಂತರ ಅವರಿಗೆ ನೀಡುವ ಕಾರ್ಯಗಳಿಗೆ ಸಂಬಂಧಿಸಿದಂತೆ ಸಮಂಜಸವಾದ ಹೊಂದಿಕೆಯನ್ನು ಮಾಡಿಕೊಂಡು, ವಿದ್ಯಾರ್ಥಿಗಳಿಗೆ ಪುಸ್ತಕವನ್ನು ಓದಲು ನಿಗದಿತ ಸಮಯವನ್ನು ಒದಗಿಸಲು ನಾವು ಪ್ರಯತ್ನಿಸುತ್ತೇವೆ. ಪುಸ್ತಕಗಳನ್ನು ಉಪಯೋಗಿಸುವುದು ಹೆಚ್ಚು ಹೆಚ್ಚು ಬೋಧನೆ ಕಲಿಕೆಯ ಅವಿಭಾಜ್ಯ ಅಂಗವಾಗಬೇಕು ಮತ್ತು ವಿದ್ಯಾರ್ಥಿಗಳು ಓದುವುದನ್ನು ಕಲಿಯುತ್ತಿರುವಾಗ ಮಾತ್ರವಲ್ಲದೆ, ಚೆನ್ನಾಗಿ ಓದುವುದನ್ನು ಕಲಿತ ಮೇಲೂ ಅದಕ್ಕೆ ಗಮನ ನೀಡಬೇಕು. ವಿದ್ಯಾರ್ಥಿಗಳು ತಾವು ಸ್ವತಂತ್ರವಾಗಿ ಗ್ರಂಥಾಲಯಗಳಿಂದ ಕಲಿತದ್ದನ್ನು ಹಂಚಿಕೊಳ್ಳಲು, ಉಪಯೋಗಿಸಲು ಅವರಿಗೆ ತರಗತಿಗಳಲ್ಲೂ ಮತ್ತು ಒಟ್ಟಾರೆ ಶಾಲಾ ಚಟುವಟಿಕೆಗಳಲ್ಲೂ (ಎಂದರೆ ದೈನಂದಿನ ಪ್ರಾರ್ಥನಾ ಸಭೆಯಲ್ಲಿ, ವಿದ್ಯಾರ್ಥಿ ಸಭೆಗಳಲ್ಲಿ, ಮಕ್ಕಳ ಪತ್ರಿಕೆಯಲ್ಲಿ), ವಿಭಿನ್ನ ಸ್ಥಳಗಳಲ್ಲಿ(ಎಂದರೆ ಸೂಚನಾ ಫಲಕ, ಗೋಡೆ ಪತ್ರಿಕೆ ಇತ್ಯಾದಿ) ಅವಕಾಶಗಳನ್ನು ನೀಡಬೇಕು.

### ಡಿ. ಅವರ ಸ್ಥಳೀಯ ಸನ್ನಿವೇಶಗಳಿಗನುಗುಣವಾಗಿ ಪಾಠಗಳನ್ನು ನೆಲೆಗೊಳಿಸುವುದು.

ಸಮುದಾಯ ಆಧಾರಿತ ತರಗತಿಗಳನ್ನು ನಡೆಸುವಲ್ಲಿ ನಮಗೆ ಎದುರಾದ ಮೊಟ್ಟಮೊದಲನೆಯ ಸವಾಲೆಂದರೆ ಒಂದು ಸುರಕ್ಷಿತವಾದ, ಚೆನ್ನಾಗಿ ಗಾಳಿ-ಬೆಳಕು ಇರುವ ಸ್ಥಳವನ್ನು ಹುಡುಕಿಕೊಳ್ಳುವುದು. ಇದಕ್ಕಾಗಿ ನಾವು ಒಂದೋ ಸಾರ್ವಜನಿಕ ಜಾಗವನ್ನು ಅಥವಾ ಯಾವುದಾದರೂ ಒಬ್ಬ ವಿದ್ಯಾರ್ಥಿಯ ಮನೆಯನ್ನು ಉಪಯೋಗಿಸಿಕೊಂಡೆವು. ಆದರೆ ಇಲ್ಲಿ ಸಹ ತರಗತಿ ನಡೆಸುವುದು ಸುಲಭವಾಗಿರಲಿಲ್ಲ. ಅಲ್ಲಿ ಕಪ್ಪುಹಲಗೆ ಇರುತ್ತಿರಲಿಲ್ಲ. ಬಹಳಷ್ಟು ಮುದ್ರಿತ ಸಾಮಗ್ರಿಗಳು ಲಭ್ಯವಿರುವ ವಾತಾವರಣ ಅದಾಗಿರುತ್ತಿರಲಿಲ್ಲ, ಕುಳಿತುಕೊಳ್ಳಲು ಸೂಕ್ತ ಸೌಕರ್ಯವಿರುತ್ತಿರಲಿಲ್ಲ ಮತ್ತು ಏಕಾಗ್ರತೆಗೆ ಭಂಗ ತರುವಂಥ ಪರಿಸರ ಇರುತ್ತಿತ್ತು. ಆ ಸನ್ನಿವೇಶವನ್ನೇ ಚೆನ್ನಾಗಿ ಉಪಯೋಗಿಸಿಕೊಳ್ಳುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳುವುದನ್ನು ಬಿಟ್ಟು ಬೇರೆ ಪರ್ಯಾಯವಿರಲಿಲ್ಲ. ಏಕಾಗ್ರತೆಗೆ ಭಂಗ ತರುವ ಅಂಶಗಳನ್ನೇ ನಾವು ನಮ್ಮ ತರಗತಿಯ ಬೋಧನೆ-ಕಲಿಕೆ ಸಾಮಗ್ರಿಯನ್ನಾಗಿ ಮಾಡಿಕೊಂಡೆವು ಮತ್ತು ಪಾಠಗಳನ್ನು ಹೇಳಿಕೊಡಲು ಸ್ಥಳೀಯವಾಗಿ ಲಭ್ಯವಿದ್ದ ಸಂಪನ್ಮೂಲಗಳನ್ನು ಉಪಯೋಗಿಸಲಾರಂಭಿಸಿದೆವು.



ಸ್ಥಳೀಯ ಅಂಶಗಳನ್ನು ಒಳಗೊಂಡು ವಿದ್ಯಾರ್ಥಿಗಳು ಬಿಡಿಸಿದ ಚಿತ್ರ

ಉದಾಹರಣೆಗೆ ಹೇಳಬೇಕೆಂದರೆ, ಹಳ್ಳಿಯೊಂದರ ದೇವಸ್ಥಾನದ ಆವರಣದಲ್ಲಿದ್ದ ನೀರಿನ ಕೊಳದ ಬಳಿ ತರಗತಿಯೊಂದು ನಡೆಯುತ್ತಿತ್ತು. ಸಹಜವಾಗಿಯೇ ವಿದ್ಯಾರ್ಥಿಗಳು ಕೊಳದ ಹಾಗೂ ದೇವಸ್ಥಾನದ ಚರಿತ್ರೆಯ ಬಗ್ಗೆ ಆಸಕ್ತರಾದರು. ನಾವು ಈ ಕುತೂಹಲವನ್ನೇ ಒಂದು ಕಿರುಸಂಶೋಧನಾ ಕಾರ್ಯವನ್ನಾಗಿ ಪರಿವರ್ತಿಸಿದೆವು. ವಿದ್ಯಾರ್ಥಿಗಳು ಹಳ್ಳಿಯ ಹಿರಿಯರೊಂದಿಗೆ ಚರ್ಚೆ ನಡೆಸಿದರು. ಹೇಗಿದ್ದರೂ ಅವರಲ್ಲಿ ಅನೇಕರು ಆ ಸ್ಥಳದಲ್ಲಿ ಲೋಕಾಭಿರಾಮವಾಗಿ ಬೆರೆತು ಮಾತುಕತೆಗೆ ಸೇರುತ್ತಿದ್ದರು. ಹಾಗೆಯೇ ಲಾಭ-ನಷ್ಟದ ಕುರಿತಾದ ಗಣಿತದ ಪಾಠವನ್ನು ಅರ್ಥಮಾಡಿಕೊಳ್ಳಲು ನಾವು ಮಕ್ಕಳಿಗೆ ಒಬ್ಬ ಸ್ಥಳೀಯರಾದ ತಿಂಡಿಗಾಡಿಯವರ


ಕೆಲಸವನ್ನು ಅಧ್ಯಯನ ಮಾಡಲು ಹೇಳಿದೆವು. ನಾವು ವಿದ್ಯಾರ್ಥಿಗಳಿಗೆ ಆತನಿಗೆ ಬೀಳುವ ಖರ್ಚು (ಇನ್ಪುಟ್ ವೆಚ್ಚ), ಮಾರಾಟ ಅವುಗಳನ್ನು ಅಧ್ಯಯನ ಮಾಡಿ ಅವರ ವ್ಯಾಪಾರದ ಲಾಭದ ವಿಶ್ಲೇಷಣೆ ಮಾಡಲು ಹೇಳಿದೆವು. ಅಳತೆ (ಮಾಪನ) ಯನ್ನು ಕಲಿಯಲಿಕ್ಕಾಗಿ ವಿದ್ಯಾರ್ಥಿಗಳು ತಾವಿರುವ ಕೋಣೆ, ಛಾವಣಿ, ಬಾಗಿಲು, ಕಿಟಕಿ, ನೀರಿನ ಟ್ಯಾಂಕ್, ಮೂಟೆಗಳು ಇವುಗಳನ್ನೆಲ್ಲಾ ಅಳೆದು ನೋಡಲು ಹೇಳಿದೆವು. ಮಕ್ಕಳು ಯಾರೂ ಉಪಯೋಗಿಸದಿದ್ದ ಮಡಕೆಗಳನ್ನು, ಪಾತ್ರೆಗಳನ್ನು ಹುಡುಕಿಕೊಂಡು ಅವುಗಳನ್ನು ತಬಲಾದಂಥ ಸಂಗೀತ ವಾದ್ಯಗಳನ್ನಾಗಿ ಪರಿವರ್ತಿಸಿಕೊಂಡರು. ಗಿಡಗಳನ್ನು,ಎಲೆಗಳನ್ನು ಗುರುತಿಸಿ ವೈಜ್ಞಾನಿಕವಾಗಿ ಅರ್ಥಮಾಡಿಕೊಂಡರು. ನಾವು, ವಿದ್ಯಾರ್ಥಿಗಳು ಹಳ್ಳಿಯಲ್ಲಿ ಒಂದಷ್ಟು ದೂರ ನಡೆದುಕೊಂಡು ಹೋಗಿ ಕಂಡು ಬಂದ ವಸ್ತುಗಳ ಪಟ್ಟಿ ಮಾಡಿ ತಾವು ಕಂಡದ್ದರ ಬಗ್ಗೆ ಚಿಕ್ಕಪುಟ್ಟ ವಾಕ್ಯಗಳಲ್ಲಿ ಬರೆಯಲು ಹೇಳಿದೆವು. ಪಂಚಾಯತ್ ಕಟ್ಟಡವೊಂದರಲ್ಲಿ ತರಗತಿಯೊಂದನ್ನು ನಡೆಸಿ, ಆ ಕಟ್ಟಡದ ಉದ್ದೇಶವನ್ನು, ಸ್ಥಳೀಯ ಆಡಳಿತ ವ್ಯವಸ್ಥೆ ಕೆಲಸ ಮಾಡುವುದು ಹೇಗೆ ಎಂಬುದನ್ನು ಅರ್ಥಮಾಡಿಸಲಾಯಿತು.


ಸ್ಥಳೀಯ ಬದುಕು ಮತ್ತು ವಸ್ತುಗಳನ್ನು ಗುರುತಿಸಿ ಅವುಗಳನ್ನು ಕಲಿಯುವ ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳುವುದರ ಮೂಲಕ ನಮಗೆ ಅರ್ಥವಾದದ್ದೇನೆಂದರೆ ನಾವೊಂದು ಪಾಠಗಳ ಅಮೂಲ್ಯ ಭಂಡಾರದ ಮೇಲೆಯೇ ಕುಳಿತಿದ್ದೆವು ಎಂಬುದು. ಅತ್ಯಂತ ಸಂಕೀರ್ಣವಾದ ಪಾಠಗಳನ್ನು ಮಕ್ಕಳಿಗೆ ತಲುಪಿಸಲು ಅವರ ಸುತ್ತಮುತ್ತ ಇದ್ದಂಥ ಸಾಮಗ್ರಿಗಳನ್ನೇ ಉಪಯೋಗಿಸಿಕೊಳ್ಳಬಹುದಿತ್ತು. ಈ ಮಾರ್ಗದಲ್ಲಿ ಆಯೋಜಿಸಿದ ಕಲಿಕೆಯು ವಿದ್ಯಾರ್ಥಿಗಳಿಗೆ ಅರ್ಥಪೂರ್ಣವಾಯಿತು. ನೇರ ಪ್ರಾಯೋಗಿಕ ಕಾರ್ಯದಲ್ಲಿ ಅವರನ್ನು ತೊಡಗಿಸಿಕೊಂಡಿತು. ಶಾಲೆಯ ಅಧ್ಯಯನ ಮತ್ತು ದೈನಂದಿನ ಬದುಕಿನ ಮಧ್ಯದ ಕಂದರವನ್ನು ಅದು ಮುಚ್ಚಿ ಹಾಕಿತು. ವಿದ್ಯಾಭ್ಯಾಸವು ತಮ್ಮ ಸುತ್ತಲಿನ ಸಂಗತಿಗಳನ್ನು ಇನ್ನಷ್ಟು ಅರ್ಥಮಾಡಿಕೊಳ್ಳಲು ನೆರವಾಗುತ್ತಿದೆ ಎನ್ನಿಸಿದಾಗ ಅವರ ಆಸಕ್ತಿ ಮತ್ತು ಸಾಮರ್ಥ್ಯ ಹೆಚ್ಚಿತು. ಅವರ ಆತ್ಮವಿಶ್ವಾಸ ವೃದ್ಧಿಯಾಯಿತು. ಶಿಕ್ಷಕರಲ್ಲದೆ ಬೇರೆ ಜನರೊಂದಿಗೆ ಅವರು ಸಂಪರ್ಕ ಸಾಧಿಸುವಂತಾಯಿತು ಮತ್ತು ಈ ರೀತಿಯಲ್ಲಿ ಇಡಿಯ ಹಳ್ಳಿಯೇ ಕಲಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿತು. ಮಕ್ಕಳು ತಮ್ಮ ಕಾರ್ಯಯೋಜನೆಗಳನ್ನು (ಪ್ರಾಜೆಕ್ಟ್ ಗಳನ್ನು) ಇಡೀ ಸಮುದಾಯದೊಂದಿಗೆ ಹಂಚಿಕೊಳ್ಳುತ್ತಿದ್ದರಿಂದ, ತಂದೆ-ತಾಯಿಯರಿಗೂ ತಮ್ಮ ಮಕ್ಕಳು ನಿಜಕ್ಕೂ ಕಲಿಯುತ್ತಿದ್ದಾರೆ ಎಂಬ ಬಗ್ಗೆ ಮತ್ತು ತಾವೂ ಸಹ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂಥದ್ದನ್ನೇ ಕಲಿಯುತ್ತಿದ್ದಾರೆ ಎಂಬ ಬಗ್ಗೆ ಪುರಾವೆಯನ್ನು ಒದಗಿಸಿತು.

ಒಂದು ಮಾಮೂಲಿ ಶೈಕ್ಷಣಿಕ ಅವಧಿಯಲ್ಲಿ ಇದನ್ನು ಕಾರ್ಯರೂಪಕ್ಕೆ ತರಲು ವಿಶೇಷ ಪ್ರಯತ್ನ ಅಗತ್ಯವಾಗುತ್ತದೆ. ನಮ್ಮ ವಿದ್ಯಾರ್ಥಿಗಳ ಹಳ್ಳಿಗಳ ಬಗ್ಗೆ ನಮಗೆ ಒಳ್ಳೆಯ ತಿಳುವಳಿಕೆ ಇರಬೇಕಾಗುತ್ತದೆ. ಸ್ಥಳೀಯ ಪ್ರಚಲಿತ ಆಗುಹೋಗುಗಳ ಬಗ್ಗೆ ಅರಿಯಲು, ವಿದ್ಯಾರ್ಥಿಗಳೇ ನಡೆಸಿಕೊಂಡು ಹೋಗುವ ದೈನಂದಿನ ಸ್ಥಳೀಯ ಸುದ್ದಿಗಳನ್ನು ಹಾಕುವ ಫಲಕದಂತಹ ವ್ಯವಸ್ಥೆ ಬೇಕಾಗುತ್ತದೆ. ಸ್ಥಳೀಯ ಪ್ರದೇಶದಲ್ಲಿರುವ ತಿಳಿವಳಿಕಸ್ಥ ಜನರನ್ನು (ಎಂದರೆ ರೈತರು, ಕುಂಬಾರರು, ಯಂತ್ರಗಳ ರಿಪೇರಿ ಮಾಡುವವರು(ಮೆಕ್ಯಾನಿಕ್), ಸಣ್ಣ ವ್ಯಾಪಾರಸ್ತರು, ಪಂಚಾಯತ್ ಸದಸ್ಯರು ಮುಂತಾದವರನ್ನು) ಗುರುತಿಸಿ ಅವರೊಂದಿಗೆ ಸಂಪರ್ಕವನ್ನು ಸಾಧಿಸಬೇಕು; ಅವರನ್ನೇ ಶಾಲೆಗೆ ಆಹ್ವಾನಿಸಬಹುದು ಅಥವಾ ಶಿಕ್ಷಕರೊಬ್ಬರ ಮಾರ್ಗದರ್ಶನದಲ್ಲಿ ಮಕ್ಕಳೇ ಅವರಿದ್ದಲ್ಲಿಗೆ ಹೋಗಬಹುದು. ಇದು ಚೆನ್ನಾಗಿ ನಡೆಯಬೇಕೆಂದರೆ, ಸ್ಥಳೀಯವಾಗಿ ಲಭ್ಯವಿರುವ ಯಾವೆಲ್ಲ ಸಂಪನ್ಮೂಲಗಳನ್ನು ಮತ್ತು ಅವಕಾಶಗಳನ್ನು ಬಳಸಿಕೊಂಡು ಯಾವ ಯಾವ ಪರಿಕಲ್ಪನೆಗಳನ್ನು ಬೋಧಿಸಬಹುದು ಎಂಬುದರ ಬಗ್ಗೆ ಶಿಕ್ಷಕರಿಗೆ ಅರಿವಿರಬೇಕು. ವಿದ್ಯಾರ್ಥಿಗಳಲ್ಲಿ ಹುದುಗಿರುವ ಜ್ಞಾನವನ್ನು, ಸ್ಥಳೀಯ ಪರಿಸರ ಮತ್ತು ಘಟನೆಗಳ ಜೊತೆ ಅವರಿಗಿರುವ ದೈನಂದಿನ ಸಂಪರ್ಕವನ್ನು ಉಪಯೋಗಿಸಿಕೊಳ್ಳಲು ಅವರು ಪ್ರಜ್ಞಾಪೂರ್ವಕ ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆ ಶಾಲಾ ಆವರಣವನ್ನು ಬಿಟ್ಟು ಹೊರಗೆ ಹೋಗಬೇಕಾಗುತ್ತದೆ ಮತ್ತು ತಕ್ಕ ಯೋಜನೆ ಹಾಕಿಕೊಂಡು ಸಣ್ಣ ಪ್ರವಾಸಗಳನ್ನು ಕೈಗೊಳ್ಳಬೇಕಾಗುತ್ತದೆ. ಬೋಧನೆ ಮತ್ತು ಕಲಿಕೆಯ ಗುಣಮಟ್ಟದ ಕುರಿತಾದ ಶಿಕ್ಷಕರ ಪುನರವಲೋಕನದಲ್ಲಿಯೂ ಈ ಅಂಶವನ್ನು ನಿಯತವಾಗಿ ಕೈಗೆತ್ತಿಕೊಳ್ಳಬೇಕಾಗುತ್ತದೆ.

**ಸ್ಥಳೀಯ ಸಂದರ್ಭಾಧಾರಿತ ನಿಗದಿತ ಕಾರ್ಯಗಳ (ಅಸೈನ್ ಮೆಂಟ್) ಮೂಲಕ ಗಣಿತವನ್ನು ಕಲಿಯುವುದು.**

ತರಗತಿಯೊಂದರಲ್ಲಿ, ಕೆಲವು ವಿದ್ಯಾರ್ಥಿಗಳಿಗೆ ಮನೆಯಿಂದ ಸುಲಭವಾಗಿ ಸಿಗುವ ವಸ್ತುಗಳನ್ನು ತಗೆದುಕೊಂಡು ಬಂದು (ಬೊಂಬೆ ಸಾಮಾನುಗಳು, ಉಪಯೋಗಿಸಿದ ಟಿನ್ ಗಳು, ಶೀಷೆಗಳು, ಆಹಾರ ವಸ್ತುಗಳ ಡಬ್ಬಗಳು, ಸೌಂದರ್ಯ ಸಾಧನಗಳ ಪೆಟ್ಟಿಗೆಗಳು, ಬರವಣಿಗೆ ಸಾಮಗ್ರಿಗಳ ಡಬ್ಬಗಳು ಇತ್ಯಾದಿ) ತರಗತಿಯಲ್ಲಿ ಅಂಗಡಿಗಳನ್ನು ನಡೆಸಲು ಹೇಳಲಾಯಿತು. ಉಳಿದವರು ಅವರ ಗ್ರಾಹಕರಾದರು. ಕೆಲವೊಂದು ಆಟದಲ್ಲಿ ಉಪಯೋಗಿಸುವ ರೂಪಾಯಿ ನೋಟುಗಳನ್ನು ಹಾಗೂ ರಸೀದಿ ಪುಸ್ತಕಗಳನ್ನೂ ಒದಗಿಸಲಾಯಿತು. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಸಾಮಾನುಗಳನ್ನು ಕೊಂಡರು ಮತ್ತು 'ಅಂಗಡಿಯವರು' ರಸೀದಿಗಳನ್ನು ತಯಾರಿಸಿದರು. ನಂತರ ಬಿಳಿ ಹಲಗೆಯ ಮೇಲೆ ಸಂದರ್ಭಾಧಾರಿತ ವಿವರಣಾತ್ಮಕ ಲೆಕ್ಕಗಳನ್ನು ಪರಿಹರಿಸಲಾಯಿತು.






## ಇ. 'ಅನಿರ್ಬಂಧಿತ' (Open ended) ಆಲೋಚನೆ ಮತ್ತು ಬರವಣಿಗೆ


ನಮ್ಮ ಶಾಲೆಯಲ್ಲಿ ಬರೆಯುವ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳುವುದು ಒಂದು ಸವಾಲು ಎಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಚಾರಿತ್ರಿಕವಾಗಿ ನಮ್ಮ ವಿದ್ಯಾರ್ಥಿಗಳು ಬಾಯಿಮಾತಿನಲ್ಲಿಯೇ ಹಂಚಿಕೊಳ್ಳುವುದಕ್ಕೆ ಅತ್ಯಂತ ಹೆಚ್ಚಿನ ಒತ್ತು ನೀಡಲಾಗಿದೆ. ಅದನ್ನೇನೋ ಅವರು ಚೆನ್ನಾಗಿಯೇ ಮಾಡುತ್ತಾರೆ ಆದರೆ ಬರೆಯುವ ವಿಷಯಕ್ಕೆ ಬಂದಾಗ ಅವರು ಎಡವುತ್ತಾರೆ. ಆದ್ದರಿಂದ ಶಾಲೆಗಳು ಮುಚ್ಚಲ್ಪಟ್ಟಾಗ ಇದು ನಮ್ಮ ಆದ್ಯತೆಗಳಲ್ಲೊಂದಾಗಿತ್ತು.

ಸಮುದಾಯ ಆಧಾರಿತ ತರಗತಿಗಳ ಆರಂಭದಲ್ಲಿ ನಾವು ಪಠ್ಯಪುಸ್ತಕಗಳನ್ನು ಉಪಯೋಗಿಸಲಿಲ್ಲ. ನಮ್ಮಲ್ಲಿ ಬಹುವರ್ಗ ಬಹುಹಂತಗಳಿಗೆ ಸೇರಿದ ಗುಂಪುಗಳಿದ್ದವು. ಆದ್ದರಿಂದ ನಾವು ಒಂದು ವಿಭಿನ್ನ ಸಾಮರ್ಥ್ಯದ ಮಟ್ಟಗಳಿಗೆ ಸರಿ ಹೊಂದುವಂತಹ ಒಂದಷ್ಟು ಗ್ರಂಥಾಲಯದ ಪುಸ್ತಕಗಳನ್ನು ಉಪಯೋಗಿಸಲು ಯೋಜಿಸಿದೆವು. ವಿದ್ಯಾರ್ಥಿಗಳು ಗಣನೀಯ ಸಮಯವನ್ನು ಓದುವುದರಲ್ಲಿ ಕಳೆಯಬೇಕು ಎಂದು ನಾವು ಉತ್ತೇಜಿಸಿದೆವು ಮತ್ತು ಅವರು ಅದಕ್ಕೆ ಚೆನ್ನಾಗಿ ಸ್ಪಂದಿಸಿದರು. ತಾವು ಓದಿದ್ದನ್ನು ಅವರುಗಳು ಬರೆಯಬೇಕೆಂದೂ ನಾವು ಪ್ರೇರೇಪಿಸಿದೆವು. ಇವೆಲ್ಲಾ ಅನಿರ್ಬಂಧಿತ ಕೆಲಸಗಳು, ಎಂದರೆ ವಿದ್ಯಾರ್ಥಿಗಳು ತಮಗೆ ಬೇಕಾದ ವಿಷಯದ ಬಗ್ಗೆ ಬೇಕಾದ ರೀತಿಯಲ್ಲಿ ಬರೆಯಬಹುದಿತ್ತು. ಜೊತೆಗೆ ಅವರಿದ್ದ ಪರಿಸರದಲ್ಲಿ ಎಷ್ಟೊಂದು ವಿದ್ಯಮಾನಗಳು ಘಟಿಸುತ್ತಿದ್ದರಿಂದ ಅವರು ದಿನಚರಿಯೊಂದನ್ನೂ ಬರೆಯಲು ನಾವು ಉತ್ತೇಜನ ನೀಡಿದೆವು. ಈ ಕೆಲಸಗಳ ಜೊತೆಗೆ ನಾವು ಕೆಲವೊಂದು ಸ್ಥಳೀಯ ಸಂದರ್ಭಗಳಿಂದ ಹೊರಹೊಮ್ಮಿದ ಕೆಲಸಗಳನ್ನು ಮತ್ತು ವಿದ್ಯಾರ್ಥಿಗಳು ತಾವೇ ಸಂಗ್ರಹಿಸಿದ ಮಾಹಿತಿಗಳು ಹಾಗೂ ಅನುಭವಗಳನ್ನು ದಾಖಲಿಸುವ ಕಾರ್ಯಯೋಜನೆಗಳನ್ನು ಸೇರಿಸಿದೆವು.


ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಸಹಪಾಠಿಗಳ ಪ್ರತಿಕ್ರಿಯೆಯನ್ನು ಪಡೆದುಕೊಳ್ಳಬೇಕೆಂದು, ಅದಕ್ಕಾಗಿ ತಾವು ಬರೆದದ್ದನ್ನು ಅವರೊಂದಿಗೆ ಹಂಚಿಕೊಳ್ಳಬೇಕೆಂದು ಉತ್ತೇಜಿಸಲಾಯಿತು. ಪ್ರತಿಕ್ರಿಯೆಗಳು ವಿಷಯಕ್ಕಿಂತ ಹೆಚ್ಚಾಗಿ ಅದರಲ್ಲಿರುವ ವಿಚಾರಗಳು, ಅವುಗಳ ಹರಿವು, ವ್ಯವಸ್ಥಿತ ಜೋಡಣೆ ಇವುಗಳ ಬಗ್ಗೆ ಇರಬೇಕು ಎಂಬುದನ್ನು ನಾವು ಖಾತ್ರಿಪಡಿಸಿದ್ದೆವು. ರೂಢಿಗತ ವಿವರಣೆಗಳು ಮತ್ತು ಮಾಹಿತಿಗಳ ಆಚೆ ಅವರು ಯೋಚಿಸಬೇಕು, ತಮ್ಮ ಭಾವನೆಗಳು, ಅಭಿಪ್ರಾಯಗಳು ಮತ್ತು ಒಂದು ಸನ್ನಿವೇಶದ ಬಗ್ಗೆ ತಮ್ಮ ಅನಿಸಿಕೆಗಳು ಇವುಗಳ ಬಗ್ಗೆ ಆಲೋಚಿಸಬೇಕೆಂದು ಅವರಿಗೆ ಪ್ರೇರಣೆ ನೀಡಲಾಗಿತ್ತು. ಅವರೊಂದು ಕಥೆಯನ್ನು ಓದಿದ್ದರೆ, ಅದನ್ನು ನಿಮ್ಮದೇ

ಪದಗಳಲ್ಲಿ ಬರೆಯಿರಿ ಎಂದು ನಾವು ಅವರನ್ನು ಕೇಳುತ್ತಿದ್ದೆವು. ಹಿರಿಯ ವಿದ್ಯಾರ್ಥಿಗಳಿಗಾಗಿ, ಅವರು ಶ್ರದ್ಧಾಪೂರ್ವಕವಾಗಿ ಓದಲಿ ಮತ್ತು ಬರೆಯಲಿ ಎಂದು ನಾವು ಪ್ರೇಮ್ ಚಂದ್ ರವರ ಕೃತಿಗಳನ್ನು ಆಯ್ದುಕೊಂಡಿದ್ದೆವು. ವಿದ್ಯಾರ್ಥಿಗಳು ಬರೆದದ್ದರಲ್ಲಿ ಕೆಲವನ್ನು ಆಯ್ಕೆ ಮಾಡಿ ನಮ್ಮ ಮಾಸಿಕವಾದ 'ಬಾಲ್ ಪತ್ರಿಕಾ' ದಲ್ಲಿ ಪ್ರಕಟಿಸುತ್ತಿದ್ದೆವು. ಪಠ್ಯಪುಸ್ತಕಗಳನ್ನು ಓದಿ ಪ್ರಶ್ನೆಗಳನ್ನು ಉತ್ತರಿಸುವಾಗ, ಅದನ್ನು ತಮ್ಮದೇ ಶಬ್ದಗಳಲ್ಲಿ ವ್ಯವಸ್ಥಿತವಾಗಿ ಬರೆಯಲು ಉತ್ತೇಜನ ನೀಡಲಾಗುತ್ತಿತ್ತು.

ಈ ಎಲ್ಲಾ ಕ್ರಮಗಳಿಂದ ಅವರ ಬರವಣಿಗೆಯಲ್ಲಿ ಪರಿಮಾಣಾತ್ಮಕವಾದ ಮತ್ತು ಗುಣಾತ್ಮಕವಾದ ಅಭಿವೃದ್ಧಿ ಉಂಟಾಯಿತು. ಈಗ ವಿದ್ಯಾರ್ಥಿಗಳು ತಾವು ಓದಿದ್ದ ಕಥೆಯನ್ನು ವಿವರಿಸಬಲ್ಲವರಾಗಿದ್ದರು ಅಥವಾ ತಮ್ಮ ಹಿಂದಿನ ದಿನದ ಚಟುವಟಿಕೆಗಳ ಬಗ್ಗೆ ವಿವರವಾಗಿ ಹೇಳಬಲ್ಲವರಾಗಿದ್ದರು. ಅವರ ಭಾವನೆಗಳು ಮತ್ತು ಅಭಿಪ್ರಾಯಗಳು ಅವರ ಬರವಣಿಗೆಯಲ್ಲಿ ಹೆಚ್ಚು ಹೆಚ್ಚು ಸ್ಫುಟವಾಗತೊಡಗಿದ್ದವು. ವಾಸ್ತವಾಂಶವನ್ನಾಧರಿಸಿದ ಬರವಣಿಗೆಯ ಶೈಲಿಯಿಂದ ಅದು ಸ್ಪಷ್ಟವಾಗಿ ಚಿಂತನಶೀಲ ಬರವಣಿಗೆಯತ್ತ ಹೊರಳಿಕೊಳ್ಳುತ್ತಿತ್ತು.




ವಿದ್ಯಾರ್ಥಿಯ ಡೈರಿಯ ಉದಾಹರಣೆ




4ನೇ ತರಗತಿಯ ವಿದ್ಯಾರ್ಥಿನಿಯು ಅವಳ ಕಥೆಯನ್ನು ವೈಟ್ ಬೋರ್ಡ್ ಮೇಲೆ ಬರೆದಿರುವುದು

ನಾವು ಇದೇ ಕಾರ್ಯತಂತ್ರವನ್ನು ಮುಂದಿನ ಶೈಕ್ಷಣಿಕ ಕಾಲಾವಧಿಯಲ್ಲೂ ಮುಂದುವರೆಸಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಬರವಣಿಗೆಯ ಕಾರ್ಯಗಳಿಗೆ ಹೆಚ್ಚು ಅನಿರ್ಬಂಧಿತ ಪ್ರಶ್ನೆಗಳನ್ನು ಇರಿಸಿಕೊಂಡು, ದಿನಚರಿ ಬರೆಯುವುದನ್ನು ಒಂದು ನಿಯತವಾದ ಅಭ್ಯಾಸವಾಗಿ ಮುಂದುವರೆಸಲು ಸಹ ನಾವು ಯೋಜಿಸಿದ್ದೇವೆ. ವಿದ್ಯಾರ್ಥಿಗಳು, ತಾವು ಬರೆದ ಲೇಖನಗಳನ್ನು ಉತ್ತಮಪಡಿಸಿಕೊಳ್ಳುವ ಉದ್ದೇಶದಿಂದ, ಅವುಗಳಿಗೆ ರಚನಾತ್ಮಕ ಹಿಮ್ಮಾಹಿತಿಗಳನ್ನು ಪಡೆದುಕೊಳ್ಳುವ ಪ್ರಕ್ರಿಯೆಗಾಗಿ ಲೇಖನಗಳನ್ನು ತರಗತಿಯೊಳಗೆ ಹಂಚಿಕೊಳ್ಳಬೇಕೆಂಬುದು ನಮ್ಮ ಆಶಯ. ವಿದ್ಯಾರ್ಥಿಗಳು ವಿಭಿನ್ನ ಮಾದರಿಯ ಬರವಣಿಗೆಗಳನ್ನು ಪ್ರಯತ್ನಿಸಲು ಉತ್ತೇಜನ ನೀಡಲಿಕ್ಕೆಂದು ಮಾಸಿಕ ಪತ್ರಿಕೆಯು ವಿಶಾಲವಾದ ವೈವಿಧ್ಯಮಯ ವಿಭಾಗಗಳನ್ನು ಹೊಂದಿರಬಹುದು. ವಿಭಿನ್ನ ಪ್ರದೇಶಗಳಲ್ಲಿರುವ ಅಜೀಂ ಪ್ರೇಮ್ ಜಿ ಶಾಲೆಗಳಲ್ಲಿ ನಾವು ಪತ್ರ ಮಿತ್ರ ಬಳಗಗಳನ್ನು ರಚಿಸಬಹುದು. ಬರವಣಿಗೆಯು, ಓದುವುದರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ ವಿದ್ಯಾರ್ಥಿಗಳಿಗೆ ನಿಯತವಾದ ಸ್ವತಂತ್ರ ಓದಿಗೆ ಸಮಯ ಅಗತ್ಯ. ಪ್ರತಿಯೊಂದು ತರಗತಿಯಲ್ಲೂ ಒಂದು ಗ್ರಂಥಾಲಯ ಮೂಲೆಯನ್ನು ಸ್ಥಾಪಿಸುವುದರಿಂದ ಮತ್ತು ನಿಗದಿತ ಗ್ರಂಥಾಲಯ ಕಾಲಾವಧಿಗಳನ್ನು ಕಾದಿರಿಸುವುದರಿಂದ ಇದನ್ನು ಸಾಧಿಸಬಹುದು.

### ಎಫ್. ಸಮುದಾಯದೊಂದಿಗೆ ಉತ್ತಮ ಬಾಂಧವ್ಯವಿರುವುದರಿಂದ ಮತ್ತು ವಿದ್ಯಾರ್ಥಿಗಳನ್ನು ಚೆನ್ನಾಗಿ ಅರಿತುಕೊಳ್ಳುವುದರಿಂದ ವಿದ್ಯಾರ್ಥಿಗಳ ಹಾಜರಾತಿ ಮತ್ತು ಕಲಿಕೆ ಉತ್ತಮವಾಗುತ್ತದೆ.

ಬಲವಾದ ಶಿಕ್ಷಕ-ವಿದ್ಯಾರ್ಥಿ ಮತ್ತು ಶಿಕ್ಷಕ ಸಮುದಾಯದ ನಡುವಿನ ಸಂಬಂಧಗಳನ್ನು ರೂಢಿಸಿಕೊಳ್ಳುವುದಕ್ಕೆ ನಾವು ಯಾವತ್ತೂ ಗಮನ ಕೊಟ್ಟಿದ್ದೇವೆ. ಕೊರೊನಾ ಪಿಡುಗು ಈ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಿಕೊಳ್ಳಲು ಅವಕಾಶ ನೀಡಿತು. ಹಳ್ಳಿಗಳಿಗೆ ಹೋಗಿ ನಮ್ಮ ವಿದ್ಯಾರ್ಥಿಗಳ ಮನೆಗಳಲ್ಲೇ ಅವರ ಕುಟುಂಬಗಳೊಂದಿಗೆ ಸಮಯ ಕಳೆಯುವುದು ಅವರೊಂದಿಗಿನ ನಮ್ಮ ಸಂಬಂಧದ ಚೈತನ್ಯಶೀಲತೆಯನ್ನೇ ಬದಲಾಯಿಸಿತು. ನಮ್ಮ ಚಿಂತನೆಗಳು ಹಾಗೂ ಆಲೋಚನೆಗಳ ಬಗ್ಗೆ ಈಗ ಹೆಚ್ಚು ವಿಶ್ವಾಸ, ಒಪ್ಪಿಗೆ ಇದೆ ಮತ್ತು ನಾವು ಹೇಳುವ ಸಂಗತಿಗಳ ಬಗ್ಗೆ ಜನತೆ ಗಮನ ಕೊಡುತ್ತಿದ್ದಾರೆ. ವಿದ್ಯಾರ್ಥಿಗಳು ನಮ್ಮೊಂದಿಗೆ ಹೆಚ್ಚಿಗೆ ತೆರೆದುಕೊಳ್ಳುತ್ತಿದ್ದಾರೆ ಮತ್ತು ಹಂಚಿಕೊಳ್ಳುತ್ತಿದ್ದಾರೆ. ಇವೆಲ್ಲವೂ ಕೂಡ ನಮ್ಮ ಮನಸ್ಸಿನಲ್ಲಿ ನಮ್ಮ ಬೋಧನೆಯ ಬಗ್ಗೆ, ಹೇಗೆ ಯೋಜನೆ ಹಾಕಿಕೊಳ್ಳಬೇಕು ಎಂಬುದರ ಬಗ್ಗೆ, ಇಡೀ ಶೈಕ್ಷಣಿಕ ಪ್ರಕ್ರಿಯೆಯನ್ನು ಇನ್ನೂ ಉತ್ತಮವಾಗಿ ಯೋಜಿಸುವುದು ಹೇಗೆ ಎಂಬುದರ ಬಗ್ಗೆ ಸಹ ಹೆಚ್ಚಿನ ಸ್ಪಷ್ಟತೆಯನ್ನು ಉಂಟು ಮಾಡುತ್ತಿದೆ.

ಲಾಕ್‌ಡೌನ್ ಆರಂಭವಾದಾಗ ದೂರವಾಣಿ ಕರೆ, ವಾಟ್ಸ್‌ಆಪ್ ಸಂದೇಶಗಳ ಮೂಲಕ ನಾವು ನಮ್ಮ ಪ್ರತಿಯೊಬ್ಬ ವಿದ್ಯಾರ್ಥಿಯ ಜೊತೆಗೆ ಸಂಪರ್ಕದಲ್ಲಿದ್ದೆವು. ಸಮುದಾಯ ಆಧಾರಿತ ತರಗತಿಗಳು ಆರಂಭವಾದಾಗ ಗುಂಪುಗಳು ಚಿಕ್ಕದಾಗಿದ್ದವು; ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಗಮನ ನೀಡುವುದು ನಮಗೆ ಸಾಧ್ಯವಾಗಿತ್ತು. ಸಾಮಾನ್ಯ ಶೈಕ್ಷಣಿಕ ಅವಧಿಯಲ್ಲಿ ನಾವು ಮಾಡುವುದಕ್ಕಿಂತಲೂ ಇದು ಹೆಚ್ಚಾಗಿಯೇ ಇತ್ತು. ನಾವು ನಮ್ಮ ವಿದ್ಯಾರ್ಥಿಗಳ ಸಾಮಾಜಿಕ ಸಂದರ್ಭ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಹೆಚ್ಚುವರಿ ಗಮನವನ್ನು ನೀಡಿದೆವು. ತತ್ಫಲವಾಗಿ ಯಾರೊಂದಿಗೂ ಬೆರೆಯದ, ಸಂಕೋಚದ ವಿದ್ಯಾರ್ಥಿಗಳು ಸಹ ಹೆಚ್ಚಾಗಿ ಹಂಚಿಕೊಳ್ಳಲು ಆರಂಭಿಸಿದರು. ಸ್ಥಳ- ಎಂದರೆ ವಿದ್ಯಾರ್ಥಿಗಳ ಮನೆ ಅಥವಾ ಸಮುದಾಯಕ್ಕೆ ಸೇರಿದ ಒಂದು ಸ್ಥಳ- ಸಹ ಮುಖ್ಯ ಪಾತ್ರವನ್ನು ವಹಿಸಿದವು. ಏಕೆಂದರೆ ವಿದ್ಯಾರ್ಥಿಗಳು ಆ ಜಾಗಗಳಲ್ಲಿ ತಾವು 'ತಾವೇ ಆಗಿದ್ದು' ಹೆಚ್ಚು ಆರಾಮವಾಗಿರುವಂತೆ ತೋರುತ್ತಿತ್ತು.

ಬಲವಾದ ಶಿಕ್ಷಕ-ವಿದ್ಯಾರ್ಥಿ ಮತ್ತು ಶಿಕ್ಷಕ ಸಮುದಾಯದ ನಡುವಿನ ಸಂಬಂಧಗಳನ್ನು ರೂಢಿಸಿಕೊಳ್ಳುವುದಕ್ಕೆ ನಾವು ಯಾವತ್ತೂ ಗಮನ ಕೊಟ್ಟಿದ್ದೇವೆ. ಕೊರೊನಾ ಪಿಡುಗು ಈ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಿಕೊಳ್ಳಲು ಅವಕಾಶ ನೀಡಿತು. ಹಳ್ಳಿಗಳಿಗೆ ಹೋಗಿ ನಮ್ಮ ವಿದ್ಯಾರ್ಥಿಗಳ ಮನೆಗಳಲ್ಲೇ ಅವರ ಕುಟುಂಬಗಳೊಂದಿಗೆ ಸಮಯ ಕಳೆಯುವುದು ಅವರೊಂದಿಗಿನ ನಮ್ಮ ಸಂಬಂಧದ ಚೈತನ್ಯಶೀಲತೆಯನ್ನೇ ಬದಲಾಯಿಸಿತು. ನಮ್ಮ ಚಿಂತನೆಗಳು ಹಾಗೂ ಆಲೋಚನೆಗಳ ಬಗ್ಗೆ ಈಗ ಹೆಚ್ಚು ವಿಶ್ವಾಸ, ಒಪ್ಪಿಗೆ ಇದೆ ಮತ್ತು ನಾವು ಹೇಳುವ ಸಂಗತಿಗಳ ಬಗ್ಗೆ ಜನತೆ ಗಮನ ಕೊಡುತ್ತಿದ್ದಾರೆ. ವಿದ್ಯಾರ್ಥಿಗಳು ನಮ್ಮೊಂದಿಗೆ ಹೆಚ್ಚಿಗೆ ತೆರೆದುಕೊಳ್ಳುತ್ತಿದ್ದಾರೆ ಮತ್ತು ಹಂಚಿಕೊಳ್ಳುತ್ತಿದ್ದಾರೆ. ಇವೆಲ್ಲವೂ ಕೂಡ ನಮ್ಮ ಮನಸ್ಸಿನಲ್ಲಿ ನಮ್ಮ ಬೋಧನೆಯ ಬಗ್ಗೆ, ಹೇಗೆ ಯೋಜನೆ ಹಾಕಿಕೊಳ್ಳಬೇಕು ಎಂಬುದರ ಬಗ್ಗೆ, ಇಡೀ ಶೈಕ್ಷಣಿಕ ಪ್ರಕ್ರಿಯೆಯನ್ನು ಇನ್ನೂ ಉತ್ತಮವಾಗಿ ಯೋಜಿಸುವುದು ಹೇಗೆ ಎಂಬುದರ ಬಗ್ಗೆ ಸಹ ಹೆಚ್ಚಿನ ಸ್ಪಷ್ಟತೆಯನ್ನು ಉಂಟು ಮಾಡುತ್ತಿದೆ.

ಲಾಕ್‌ಡೌನ್ ಆರಂಭವಾದಾಗ ದೂರವಾಣಿ ಕರೆ, ವಾಟ್ಸ್‌ಆಪ್ ಸಂದೇಶಗಳ ಮೂಲಕ ನಾವು ನಮ್ಮ ಪ್ರತಿಯೊಬ್ಬ ವಿದ್ಯಾರ್ಥಿಯ ಜೊತೆಗೆ ಸಂಪರ್ಕದಲ್ಲಿದ್ದೆವು. ಸಮುದಾಯ ಆಧಾರಿತ ತರಗತಿಗಳು ಆರಂಭವಾದಾಗ ಗುಂಪುಗಳು ಚಿಕ್ಕದಾಗಿದ್ದವು; ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಗಮನ ನೀಡುವುದು ನಮಗೆ ಸಾಧ್ಯವಾಗಿತ್ತು. ಸಾಮಾನ್ಯ ಶೈಕ್ಷಣಿಕ ಅವಧಿಯಲ್ಲಿ ನಾವು ಮಾಡುವುದಕ್ಕಿಂತಲೂ ಇದು ಹೆಚ್ಚಾಗಿಯೇ ಇತ್ತು. ನಾವು ನಮ್ಮ ವಿದ್ಯಾರ್ಥಿಗಳ ಸಾಮಾಜಿಕ ಸಂದರ್ಭ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಹೆಚ್ಚುವರಿ ಗಮನವನ್ನು ನೀಡಿದೆವು. ತತ್ಫಲವಾಗಿ ಯಾರೊಂದಿಗೂ ಬೆರೆಯದ, ಸಂಕೋಚದ ವಿದ್ಯಾರ್ಥಿಗಳು ಸಹ ಹೆಚ್ಚಾಗಿ ಹಂಚಿಕೊಳ್ಳಲು ಆರಂಭಿಸಿದರು. ಸ್ಥಳ- ಎಂದರೆ ವಿದ್ಯಾರ್ಥಿಗಳ ಮನೆ ಅಥವಾ ಸಮುದಾಯಕ್ಕೆ ಸೇರಿದ ಒಂದು ಸ್ಥಳ- ಸಹ ಮುಖ್ಯ ಪಾತ್ರವನ್ನು ವಹಿಸಿದವು. ಏಕೆಂದರೆ ವಿದ್ಯಾರ್ಥಿಗಳು ಆ ಜಾಗಗಳಲ್ಲಿ ತಾವು 'ತಾವೇ ಆಗಿದ್ದು' ಹೆಚ್ಚು ಆರಾಮವಾಗಿರುವಂತೆ ತೋರುತ್ತಿತ್ತು.

ಜೊತೆಗೆ ನಾವು ಪೋಷಕರೊಂದಿಗೆ ಸಹ ಸತತವಾದ ಸಂವಾದವನ್ನು ಮುಂದುವರೆಸಿದ್ದೆವು. ತರಗತಿಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅವರ ನೆರವನ್ನು ಪೂರ್ವಭಾವಿಯಾಗೇ ಕೇಳಿಕೊಂಡಿದ್ದೆವು. ಹೀಗಾಗಿ ವಿದ್ಯಾರ್ಥಿಗಳು ಮನೆಗಳಲ್ಲಿ ತಮಗೆ ನಿಗದಿಯಾಗಿದ್ದ ಕೆಲಸಗಳನ್ನು ಮಾಡಲು ಅವರು ಸ್ವಲ್ಪ ಸಮಯಾವಕಾಶ ಮಾಡಿಕೊಡುತ್ತಿದ್ದರು. ಅವರು ಸಹ ಚೆನ್ನಾಗಿಯೇ ಭಾಗವಹಿಸಿದರು. ಅವರಲ್ಲಿನ ಹಳೆಯ ವಿದ್ಯಾರ್ಥಿಗಳು ತರಗತಿಗಳನ್ನು ನಿರ್ವಹಿಸುವಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಿದರು ಮತ್ತು ಸ್ಥಳೀಯ ಪೋಷಕರು ನೆರೆಹೊರೆಯ ಪ್ರದೇಶಗಳಿಂದ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದರು. ಕೆಲವರು ತಮ್ಮ ಮಹಡಿ ಅಥವಾ ಪಡಸಾಲೆಗಳನ್ನು

ತರಗತಿಗಳನ್ನು ನಡೆಸಲು ನೀಡಿದರು. ಇನ್ನು ಕೆಲವರು ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳನ್ನು ನಮಗೆ ಒದಗಿಸಿದರು, ಒಟ್ಟಿನಲ್ಲಿ ಅದೊಂದು ನಾವು ಅಲ್ಲಿಯವರೆಗೂ ಅನುಭವಿಸದಿದ್ದ ಅತ್ಯುತ್ತಮ ಸಾಮುದಾಯಿಕ ಭಾವನೆಯಾಗಿತ್ತು.

ಲಾಕ್‌ಡೌನ್ ನ ಸಂದರ್ಭದಲ್ಲಿ ಆರ್ಥಿಕವಾಗಿ ಅವಕಾಶವಂಚಿತ ಹಿಂದುಳಿದ ಕುಟುಂಬಗಳಿಗೆ ದವಸ ಧಾನ್ಯಗಳ ಚೀಲಗಳನ್ನು ವಿತರಿಸಲು ಸಹ ಪೋಷಕರು ನಮಗೆ ನೆರವು ನೀಡಿದರು. ನಮ್ಮ ಕೋವಿಡ್ ಮಾನವೀಯ ನೆರವು ನೀಡುವಿಕೆ ಕಾರ್ಯಕ್ರಮದ ಭಾಗವಾಗಿ ಹಳ್ಳಿಗಳಲ್ಲಿ ಜಾಗೃತಿ ಮೆರವಣಿಗೆ(ರಾಲಿ) ಗಳನ್ನು ಸಂಘಟಿಸಲಿಕ್ಕೆ ಅವರು ಸಹಾಯ ಮಾಡಿದರು. ಅವರೊಂದಿಗೆ ನಮ್ಮ ಸಂಬಂಧವನ್ನು ಬಲಪಡಿಸಲು ಇದೂ ಕೂಡಾ ಸಹಾಯಕವಾಯಿತು.

ಈ ಎಲ್ಲ ಅನುಭವಗಳಿಂದ ಸ್ಪಷ್ಟವಾದದ್ದೇನೆಂದರೆ, ವಿದ್ಯಾರ್ಥಿಗಳೊಂದಿಗೆ ಮತ್ತು ಸಮುದಾಯದೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳುವುದು, ವಿದ್ಯಾರ್ಥಿಗಳನ್ನು ಸತತವಾಗಿ ತೊಡಗಿಸಿಕೊಳ್ಳುವುದರ ಮೇಲೆ ಮತ್ತು ಅವರ ಕಲಿಕೆಯ ಮೇಲೆ ನೇರವಾದ ಧನಾತ್ಮಕವಾದ ಪರಿಣಾಮವನ್ನು ಬೀರುತ್ತದೆ ಎಂಬುದು. ಉದಾಹರಣೆಗೆ ಅವರ ಹಾಜರಾತಿ ಉತ್ತಮವಾಯಿತು; ನಾವು ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಮತ್ತು ವೈಯಕ್ತಿಕ ಅಂಶಗಳನ್ನು ಹಂಚಿಕೊಳ್ಳುವುದು ಹೆಚ್ಚಿದಂತೆ ತರಗತಿಗಳನ್ನು ಚೆನ್ನಾಗಿ ನಡೆಸುವುದಕ್ಕೆ ಅದು ನೆರವಾಯಿತು. ನಮ್ಮ ಒಡನಾಟಗಳು (ಮಾತುಕತೆಗಳು) ಹೆಚ್ಚು ಸಂವೇದನಾಶೀಲವಾದವು. ನಮ್ಮ ಸಂಭಾಷಣೆಗಳು ಹೆಚ್ಚು ಪ್ರಸ್ತುತವಾದವು ಮತ್ತು ಅದರಿಂದಾಗಿ ಪರಿಣಾಮಕಾರಿಯಾದವು. ಒಟ್ಟಾರೆ ವಾತಾವರಣದಲ್ಲಿ ಪರಸ್ಪರ ಗೌರವವಿದ್ದು, ಅದರಿಂದಾಗಿ ಹಿಮ್ಮಾಹಿತಿ ಮತ್ತು ವಿಮರ್ಶಾತ್ಮಕ ನುಡಿಯನ್ನು ಧನಾತ್ಮಕವಾಗಿ ಸ್ವೀಕರಿಸಲಾಯಿತು. ಕೊನೆಯ ಮಾತನ್ನು ಹೇಳಬೇಕೆಂದರೆ, ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಡನೆ ಉಂಟಾಗುವ ಉತ್ತಮವಾದ ಸಂಬಂಧದ ಗಟ್ಟಿಯಾದ ತಳಹದಿಯ ಮೇಲೆಯೇ ಶಿಕ್ಷಕರ ಬೋಧನಾ ಯತ್ನಗಳು ಫಲ ನೀಡುತ್ತವೆ. ಆದ್ದರಿಂದ ಸಾಧಾರಣ ವಾತಾವರಣದಲ್ಲಿಯೂ ಸಹ ಈ ಅಂಶಕ್ಕೆ ಸಂಬಂಧಿಸಿದಂತೆ ಸಮಯವನ್ನು ವಿನಿಯೋಗಿಸುವುದು ಅನಿವಾರ್ಯವಾಗುತ್ತದೆ.

ಮೂರು ಪ್ರದೇಶಗಳಲ್ಲಿ, ಲಾಕ್ ಡೌನ್ ಅವಧಿಯಲ್ಲಿ ಆರಂಭವಾದ ಓದುವ ಕ್ಲಬ್ಬುಗಳು, ಸಮುದಾಯದ ಆಸಕ್ತಿ ಮತ್ತು ಬೆಂಬಲಗಳಿಂದಾಗಿ ಈಗಲೂ ಮುಂದುವರೆದಿವೆ. ಇನ್ನು ಮುಂದೆ ಸಹ ಈ ನಿಟ್ಟಿನಲ್ಲಿ ಕೆಲಸ ಮಾಡಲು ನಮ್ಮ ಶಾಲೆಯಲ್ಲಿ ವ್ಯವಸ್ಥೆ ಇರುತ್ತದೆ. ನಾವು ಪ್ರತಿಯೊಬ್ಬ ವಿದ್ಯಾರ್ಥಿಯ ಸಂಕ್ಷಿಪ್ತ ವ್ಯಕ್ತಿಚಿತ್ರವನ್ನೂ ತಯಾರಿಸಿಡುತ್ತೇವೆ ಮತ್ತು ಇದಕ್ಕಾಗಿ ಶಿಕ್ಷಕರು ಮತ್ತೆ ವಿದ್ಯಾರ್ಥಿಯನ್ನು, ಅವರ ಸನ್ನಿವೇಶವನ್ನು, ಅವರ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಈ ವ್ಯಕ್ತಿಚಿತ್ರವು ಯೋಜನೆ ರೂಪಿಸಲು, ವಿದ್ಯಾರ್ಥಿಗಳ ಅಭಿವೃದ್ಧಿಯ ಮೇಲೆ ನಿರಂತರವಾಗಿ ನಿಗಾ ಇಡಲು ಸಹಾಯಕವಾಗುತ್ತದೆ ಮತ್ತು ಪೋಷಕರು ಹಾಗೂ ಸಮುದಾಯದೊಂದಿಗೆ ನಿಕಟ ಸಂಪರ್ಕವನ್ನು ಉಳಿಸಿಕೊಂಡು ಹೋಗುತ್ತದೆ.

ಸಮುದಾಯದೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳಲು, ಸಮುದಾಯದ ಸದಸ್ಯರು ಭಾಗವಹಿಸಲು ಸಾಧ್ಯವಾಗುವ ನಿಯತವಾದ ಸಮಾರಂಭಗಳನ್ನು ನಡೆಸಬಹುದು. ವಿದ್ಯಾರ್ಥಿಗಳ ಕಲಿಕೆಯನ್ನು ಬಲಪಡಿಸಲು ಸ್ಥಳೀಯ ಸಂಪನ್ಮೂಲಗಳನ್ನು ಹಾಗೂ ಸಮಾರಂಭಗಳನ್ನು ಉಪಯೋಗಿಸಬಹುದು. ಆದ್ದರಿಂದ ಹತ್ತಿರದಲ್ಲಿರುವ ಅಂತಹ ಸ್ಥಳಗಳಿಗೆ ಭೇಟಿ ನೀಡುವುದಕ್ಕೆ ನಮ್ಮ ಶಿಕ್ಷಕರು ನಿಯತವಾದ ಯೋಜನೆಯಲ್ಲಿ ಅವಕಾಶವಿರಬೇಕು. ಸಾಧ್ಯವಿದ್ದರೆ ಹಳ್ಳಿಯಲ್ಲಿನ ಕೆಲವು ಸ್ವಯಂ ಸೇವಕರ ನೆರವಿನೊಂದಿಗೆ ಸಮುದಾಯ ಗ್ರಂಥಾಲಯಗಳನ್ನು ನಾವು ನಡೆಸಬಹುದು. ಇದು ಅವರೊಂದಿಗೆ ನಮ್ಮ ಸಂವಾದವನ್ನು ಮುಂದುವರೆಸಲು ನೆರವಾಗುತ್ತದೆ. ನಮ್ಮ ಹಳೆಯ ವಿದ್ಯಾರ್ಥಿಗಳನ್ನು ಸಹ ಇದಕ್ಕೆ ಸಹಾಯ ಮಾಡಲು ಕೇಳಬಹುದು. ಬೇರೆ ಬೇರೆ ಶಿಕ್ಷಕರು ಸರದಿಯಂತೆ ಇದನ್ನು ನಿರ್ವಹಿಸಬಹುದು; ಹೀಗಾದಾಗ ಈ ಚಟುವಟಿಕೆಗೆ ಸಂಬಂಧಿಸಿದಂತೆ ಉದ್ದೇಶಪೂರ್ವಕವಾಗಿ ಸಮಯವನ್ನು ಶ್ರದ್ಧೆಯಿಂದ ಮೀಸಲಿಡಲು ಶಾಲೆಯ ಪರವಾಗಿ ಒಬ್ಬರಲ್ಲ ಇನ್ನೊಬ್ಬರು ಇರಲು ಸಾಧ್ಯವಾಗುತ್ತದೆ.

### ಜಿ. ಹಳೆಯ ವಿದ್ಯಾರ್ಥಿಗಳೊಂದಿಗೆ ಬಲವಾದ ಸಂಪರ್ಕದಿಂದ ಅನೇಕ ಅನುಕೂಲಗಳಿರುತ್ತವೆ

ಮೊದಲನೆಯ ಲಾಕ್ಡೌನ್ ಸಂದರ್ಭದಲ್ಲಿ ನಮ್ಮ ವಿದ್ಯಾರ್ಥಿಗಳ ಓದಿನಲ್ಲಿ ಒಂದಿಷ್ಟು ನಿರಂತರತೆಯನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ನೆರವಾಗಲಿಕ್ಕೆ ಹಾಗೂ ಸಮುದಾಯದಲ್ಲಿ ಕೋವಿಡ್ ಜಾಗೃತಿಯನ್ನು ಉಂಟು ಮಾಡಲಿಕ್ಕೆ ಪ್ರಚಾರಾಂದೋಲನವನ್ನು ನಡೆಸಲು ನಾವು ನಮ್ಮ ಹಳೆಯ ವಿದ್ಯಾರ್ಥಿಗಳನ್ನು ಸಂಪರ್ಕಿಸಿದೆವು.

ಈ ಆಂದೋಲನವನ್ನು ನಡೆಸುವಲ್ಲಿ ನಮ್ಮ ಹಳೆಯ ವಿದ್ಯಾರ್ಥಿಗಳು ತುಂಬು ಹೃದಯದಿಂದ ಭಾಗವಹಿಸಿದರು. ಅವರು ಘೋಷಣೆಗಳನ್ನು, ಹಾಡುಗಳನ್ನು ರಚಿಸಿದರು, ನಾಟಕಗಳನ್ನು ಸಿದ್ಧಪಡಿಸಿದರು, ಗ್ರಾಮಗಳಲ್ಲಿ ಮೆರವಣಿಗೆಗಳನ್ನು ಸಂಘಟಿಸಿದರು, ಮುಖಗವಸನ್ನು(ಮಾಸ್ಕ್ ಗಳು) ಧರಿಸಲು, ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳಲು ಮತ್ತು ಕೈಗಳನ್ನು ತೊಳೆಯಲು ಜನರನ್ನು ಪ್ರೇರೇಪಿಸಲಿಕ್ಕಾಗಿ ಅವರು ಸಾರ್ವಜನಿಕ ಸ್ಥಳಗಳಲ್ಲಿ

ಕಿರುನಾಟಕಗಳನ್ನು ಆಡಿದರು. ಕೆಲವೊಂದು ಸ್ಥಳಗಳಲ್ಲಿ ಸಮುದಾಯ ತರಗತಿಗಳನ್ನು ಸಂಘಟಿಸಲಿಕ್ಕೆ ಅಥವಾ ನೆರೆಹೊರೆ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ನಿಗದಿತ ಕೆಲಸವನ್ನು ಅರ್ಥಮಾಡಿಕೊಳ್ಳಲಿಕ್ಕೆ ಅವರು ನೆರವನ್ನು ಕೂಡ ಒದಗಿಸಿದರು.

ಸಮುದಾಯಗಳಲ್ಲಿ ನಮ್ಮ ಹಳೆಯ ವಿದ್ಯಾರ್ಥಿಗಳೇ ನಮ್ಮ ಪ್ರತಿನಿಧಿಗಳು. ಹೀಗಾಗಿ ಅವರೊಂದಿಗೆ ಸಂಪರ್ಕದಲ್ಲಿರುವುದು, ಅವರು ತಮ್ಮ ಬದುಕಿನಲ್ಲಿ ಯಶಸ್ವಿಯಾಗುವಂತೆ ಬೆಂಬಲ ನೀಡುವುದು ಮತ್ತು ಮಾರ್ಗದರ್ಶನ ಮಾಡುವುದು ಒಳ್ಳೆಯದು. ಅವರ ಯಶಸ್ಸು ಕಿರಿಯ ವಿದ್ಯಾರ್ಥಿಗಳು ಚೆನ್ನಾಗಿ ಸಾಧನೆ ಮಾಡಲು ಸ್ಫೂರ್ತಿ ನೀಡುತ್ತದೆ. ಈ ಎಲ್ಲ ಕಾರಣಗಳಿಂದಾಗಿ ನಾವು ಚೆನ್ನಾಗಿ ಯೋಚಿಸಿ ತೀರ್ಮಾನಿಸಿದ ಯೋಜನೆಯನ್ನು ಸಿದ್ಧಪಡಿಸಬೇಕಾಗುತ್ತದೆ. ಹಳೆಯ ವಿದ್ಯಾರ್ಥಿಗಳ ಕಾರ್ಯಕ್ರಮವನ್ನು ಸಂಯೋಜಿಸಲು ನಾವು ಒಬ್ಬ ಶಿಕ್ಷಕರನ್ನು ಜವಾಬ್ದಾರರನ್ನಾಗಿಸಬೇಕಾಗುತ್ತದೆ. ಮಾಸಿಕ ಪುನರವಲೋಕನ ಸಭೆಗಳು ಈ ವಿಷಯವನ್ನು ಕೈಗೆತ್ತಿಕೊಳ್ಳಬಹುದು. ಇವರಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಸೇರಲು ಪ್ರವೇಶ ಪರೀಕ್ಷೆಯ ಸಿದ್ಧತೆಗಾಗಿ ಅಭ್ಯಸಿಸಲು ಬೆಂಬಲ ಒದಗಿಸಲು ನಮ್ಮ ಅವಶ್ಯಕತೆ ಇರುತ್ತದೆ. ಅವರಿಗೆ ಅವರ ವೃತ್ತಿ ಬದುಕಿಗೆ ಸಂಬಂಧಿಸಿದಂತೆ ಸಹ ಮಾರ್ಗದರ್ಶನದ ಅವಶ್ಯಕತೆ ಇರಬಹುದು.

## 5. ಸಮಾರೋಪ

ಈ ಒಳನೋಟಗಳು ಸ್ವಯಂವೇದ್ಯ ಅನ್ನಿಸಬಹುದು ಅಥವಾ ಇದು ತೀರ ಸಾಮಾನ್ಯ ತಿಳುವಳಿಕೆ ಎನ್ನಿಸಬಹುದು. ಆದರೆ ಅದರ ಅನುಷ್ಠಾನದ ವಿವರಗಳಿಗೆ ನಿಜವಾದ ಪ್ರಯತ್ನ ಬೇಕಾಗುತ್ತದೆ. ಸಾಮಾನ್ಯವಾಗಿ ನಮ್ಮ ಗಮನಕ್ಕೂ ಬಾರದ ಅಂಚಿನಲ್ಲಿ ಉಳಿದುಬಿಡಬಹುದಾದ ಅಂಶಗಳ ಮೇಲೆ ಗಮನ ಕೊಡಲು ನಮಗೆ ಈ ಪಿಡುಗು ಸೂಕ್ತ ಸನ್ನಿವೇಶವನ್ನು ಸೃಷ್ಟಿಸಿತು. ಉದಾಹರಣೆಗೆ ಪುಸ್ತಕಗಳನ್ನು ಓದುವುದು ಭಾಷಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ ಎಂಬುದು ನಮಗೆಲ್ಲಾ ಗೊತ್ತಿರುವ ಸಂಗತಿ. ಆದರೆ ತರಗತಿಯೊಂದನ್ನು ಒಂದಷ್ಟು ಗ್ರಂಥಾಲಯದ ಪುಸ್ತಕಗಳ ಮೇಲೆಯೇ ಆಧಾರವಾಗುವಂತೆ ಮಾಡಬಹುದು ಎಂಬುದನ್ನು ನಾವೆಂದೂ ಯೋಚಿಸಿರಲಿಲ್ಲ; ಆದರೆ ಪುಸ್ತಕ ಓದುವುದಕ್ಕೆ ಇದು ಒಂದು ನಿಗದಿತವಾದ ಕಾಲಾವಧಿಗಿಂತ (ಪೀರಿಯಡ್ ಗಿಂತ) ಹೆಚ್ಚು ಪರಿಣಾಮಕಾರಿ ಎಂಬುದು ಸಾಬೀತಾಯಿತು. ಅದೇ ಸಮಯದಲ್ಲಿ ಈ ಕಾರ್ಯತಂತ್ರಗಳು ಯಶಸ್ವಿಯಾಗಲು ವಿದ್ಯಾರ್ಥಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದು, ಅವರ ಸಾಮಾಜೋ-ಸಾಂಸ್ಕೃತಿಕ ಪರಿಸರವನ್ನು, ಸಮುದಾಯವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗುತ್ತದೆ. ಮತ್ತೆ ಇದಕ್ಕೆ ಮಾಮೂಲಾದ ತರಗತಿ ಕೇಂದ್ರಿತ ಚಿಂತನೆಯ ಆಚೆಗೆ ಯೋಚಿಸುವುದು ಅಗತ್ಯವಾಗಿದ್ದು ಇದು ಸಾಮಾನ್ಯ ಶಾಲಾ ದಿನಗಳಲ್ಲಿ ನಮಗೆ ಸಹಜವಾಗಿ ಸಾಧ್ಯವಾಗುತ್ತಿರಲಿಲ್ಲ.



ಈ ಎಲ್ಲ ಪ್ರಯತ್ನಗಳಿಂದಾಗಿ ನಮ್ಮ ಮಕ್ಕಳು ಪ್ರಗತಿಯನ್ನು ಸಾಧಿಸಿದರು ಮತ್ತು ತಾವು ಕಲಿತಿದ್ದುದನ್ನು ಮರೆಯಲಿಲ್ಲ. ಅದನ್ನು ನಾವು ನಿರ್ದಿಷ್ಟ ಕಾಲಾವಧಿಗೊಮ್ಮೆ ನಿಯತವಾಗಿ ಮೌಲ್ಯಮಾಪನ ಮಾಡುತ್ತಾ ನಿಗಾ ಇರಿಸಿದ್ದೆವು. ಹೀಗಾಗಿ ನಮ್ಮ ನಿಯತವಾದ 'ಸಾಮಾನ್ಯ ಕಲಿಕಾ ಪ್ರಕ್ರಿಯೆ'ಯಲ್ಲೂ ಈ ಕಾರ್ಯತಂತ್ರಗಳನ್ನು ಮುಂದುವರೆಸುವುದು ಸಮಂಜಸವಾದುದಾಗಿದೆ. ಮುಂಬರುವ ದಿನಗಳಲ್ಲಿ ಮತ್ತೆ ಶಾಲೆಗಳು ಆರಂಭವಾಗಿ ಎಂದಿನಂತೆ ನಡೆಯಲಾರಂಭಿಸಿದಾಗ ನಾವು ಈ ಕಲಿಕೆಗಳನ್ನು ಉಪಯೋಗಿಸಿಕೊಂಡು ಮತ್ತಷ್ಟು ಉತ್ತಮ ರೀತಿಯಲ್ಲಿ ಬೋಧನಾ-ಕಲಿಕಾ ವಿಧಾನಗಳನ್ನು ಅಭಿವೃದ್ಧಿಪಡಿಸಬಹುದು.

**Azim Premji University**
Buragunte Village, Sarjapura Hobli, Anekal
Taluk,Billapura Gram Panchayat, Bengaluru – 562125

080-6614 5136

www.azimpremjiuniversity.edu.in

**Facebook:** /azimpremjiuniversity **Instagram:** @azimpremjiuniv **Twitter:** @azimpremjiuniv